ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಅಕ್ಟೋಬರ್, ೨೦೦೦ ಸಂಚಿಕೆ 3

ವಾಜಪೇಯಿಯವರ ಅಮೇರಿಕಾ ಯಾತ್ರೆ ಫಲಪ್ರದವೆ?

ಕೈಗೆಲಸದ ಶಿಕ್ಷಣದಿಂದ ಸಂಪತ್ತು

ಬೆಂಗಳೂರು ಮತ್ತು ರಾಜಕುಮಾರ್

ಕಮಲದಂತೆ ಬಾಳು ಸಮಗ್ರ ವಸ್ತು

ಮಹಾದೇವ್ ದೇಸಾಯಿ

ಅಪರಾಧಿ ರಾಜಕಾರಣದ ವಿರುದ್ಧ ಸಮಾಜ ದನಿ ಎತ್ತಲಿ

ವೀರಪ್ಪನ್ ಸಿದ್ಧಾಂತ ಮತ್ತು ನ್ಯಾಯಾಧೀಶರ ಅಚಾತುರ್ಯದ ಅಭಿಪ್ರಾಯ

ಗೋಹತ್ಯೆ ಮತ್ತು ಮಾಂಸದ ರಫ್ತಿಗೆ ಯಾರು ಹೊಣೆ?

★ ಈ ಸಂಚಿಕೆಯಲ್ಲಿ ★

ನಾವು ದುಡಿಯುವ ಜನ.
ನಮ್ಮ ಅಧಿಕಾರ ಬಂದಾಗ
ಪೋಲೀಸರನ್ನು, ನ್ಯಾಯಾಧೀಶರನ್ನು
ಮನುಷ್ಯರನ್ನಾಗಿ ಮಾಡುತ್ತೇವೆ.
ಟ್ಯಾಂಕುಗಳು ಬುಲ್‌ಡೋಜರ್ ಆಗುತ್ತವೆ
ತಗ್ಗು-ದಿನ್ನೆಯು ನೆಲ ಸಮನಾಗುತ್ತದೆ.
ಬಂದೂಕಿನ ಬಾಯಲ್ಲಿ
ಗುಬ್ಬಿ ಗೂಡು ಕಟ್ಟುತ್ತದೆ.
'ಕೆಂಪುದೀಪ'ದಡಿ ಉದ್ಯಾನವನವಾಗುತ್ತವೆ
ಒಂದೇ ಒಂದು ಸಲ ಅವಕಾಶ ಸಿಗಲಿ
ಭೂಗೋಳದ ತುಂಬೆಲ್ಲ
ಶಾಂತಿಯ ಬೀಜ ಬಿತ್ತುತ್ತೇವೆ.
ಮುಂದೆ,
ನಮ್ಮ ಮಕ್ಕಳು ಶಬ್ದಕೋಶ ತಿರುವಿ
ವೀರಗಲ್ಲುಗಳ ಅರ್ಥ ಹುಡುಕುತ್ತಾರೆ.

-ರಮಜಾನ್ ದರ್ಗಾ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೩

ಅಕ್ಟೋಬರ್ ೨೦೦೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :
ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ ರೂ ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬-/೫೮೭೫೪

ಜನಪದ ಸಂಗತಿ ....

ಕೊನೆಗೂ ಅಯೋಡಿನ್ ರಹಿತ ಉಪ್ಪಿನ ಮಾರಾಟದ ಮೇಲಿನ ಕೇಂದ್ರ ಸರ್ಕಾರದ ನಿಷೇಧಾಜ್ಞೆ ೨೦೦೦ ಸೆಪ್ಟೆಂಬರ್ ೧೩ ರಂದು ರದ್ದಾಯಿತು! ಸುಮಾರು ೨ ವರ್ಷಗಳ ಹೋರಾಟ ಫಲವಾಗಿ ಇದು ಸಾಧ್ಯವಾಗಿದೆ. ಕಳೆದ ೧೯೯೮ ಮೇ ೨೮ ರಿಂದ ನಿಷೇಧಾಜ್ಞೆ ಜಾರಿಗೆ ಬಂದಿತ್ತು. ಇನ್ನು ಮೇಲೆ ಜನರು ಸಾದಾ ಉಪ್ಪನ್ನು ಮಾರಬಹುದು, ಖರೀದಿಸಬಹುದು ಮತ್ತು ಉಪಯೋಗಿಸಬಹುದು. ಅಯೋಡಿನ್ ಉಪ್ಪನ್ನು ಸೇವಿಸುವುದರಿಂದ ನಾವು ಅನಗತ್ಯವಾಗಿ ಹೆಚ್ಚು ಅಯೋಡಿನ್‌ನ್ನು ನಮ್ಮ ಶರೀರಕ್ಕೆ ಸೇರಿಸಿಕೊಳ್ಳುತ್ತೇವೆ; ಅಲ್ಲದೆ, ಈ ಉಪ್ಪನ್ನು ತಯಾರಿಸುತ್ತಿರುವ ಬಂಡವಾಳಶಾಹಿ ಬಹುರಾಷ್ಟ್ರೀಯ ಕಂಪನಿಗಳ ಬೊಕ್ಕಸವನ್ನೂ ತುಂಬುತ್ತೇವೆ ಮತ್ತು ಸಾಣೆಕಟ್ಟಾ ಮತ್ತು ಗೋಕರ್ಣದಂಥ ಉಪ್ಪು ತಯಾರಿಕಾ ಕೇಂದ್ರದಲ್ಲಿ ವಂಶಪರಂಪರಾಗತವಾಗಿ ಕೆಲಸ ಮಾಡುತ್ತಿರು ಸಾವಿರಾರು ಜನರನ್ನು ಸಂಕಷ್ಟದ ಕೂಪದೊಳಕ್ಕೆ ತಳ್ಳುತ್ತೇವೆ. ಆದ್ದರಿಂದ ಇನ್ನು ಮೇಲೆ ನಿಮ್ಮ ಮನೆಯ ಉಪಯೋಗಕ್ಕಾಗಿ ಅಯೋಡಿನ್ ಇಲ್ಲದ ಉಪ್ಪನ್ನೇ ಅಂಗಡಿಯಿಂದ ಕೇಳಿ ಪಡೆಯಿರಿ. ನಿಮ್ಮ ಆರೋಗ್ಯ ಕಾಪಾಡಿಕೊಳ್ಳಿರಿ. ಬಿಳಿ ಬಣ್ಣಕ್ಕೆ, ಆಕರ್ಷಕ ಪೊಟ್ಟಣಕ್ಕೆ, ದಾರಿತಪ್ಪಿಸುತ್ತಿರುವ ಜಾಹಿರಾತುಗಳಿಗೆ ಮೋಸ ಹೋಗಬೇಡಿ. ಅಯೋಡಿನ್ ಉಪ್ಪಿನ ವಿರುದ್ಧದ ಹೋರಾಟ ನಡೆಸಿದ ಸರ್ವ ಸೇವಾ ಸಂಘಕ್ಕೆ ಮತ್ತು ಈ ಬಗ್ಗೆ ದಿಟ್ಟ ನಿಲುವು ತಳೆದ ನೂರಾರು ವೈದ್ಯರಿಗೆ ಹಾಗೂ ಬೆಂಬಲವಿತ್ತ ಪತ್ರಿಕೋದ್ಯಮಕ್ಕೆ ಸ್ವಾಭಿಮಾನಿ ಹಾಗೂ ಜಾಗೃತ ಭಾರತೀಯರಿಗೆ ಹಾರ್ದಿಕ ಅಭಿನಂದನೆಗಳು.

ಸೆಪ್ಟಂಬರ್ ೧೫ ರಿಂದ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ಕ್ರೀಡಾ ಸ್ಪರ್ಧೆಗಳಲ್ಲಿ ಭಾರತದ ಗೃಹಿಣಿ ಕರ್ಣಂ ಮಹೇಶ್ವರಿ ಭಾರ ಎತ್ತುವ ಸ್ಪರ್ಧೆಯಲ್ಲಿ ೨೪೦ ಕೆ. ಜಿ. ಭಾರ ಎತ್ತುವ ಮೂಲಕ ಕಂಚಿನ ಪದಕ ಪಡೆದುದಕ್ಕಾಗಿ 'ಜನಪದ ವಿಚಾರ' ವು ಅವಳನ್ನು ಹಾರ್ದಿಕವಾಗಿ ಅಭಿನಂದಿಸುತ್ತದೆ. ಒಲಿಂಪಿಕ್ಸ್‌ಗಳಲ್ಲಿ ಭಾರತ ಹಿಂದುಳಿಯುತ್ತಾ ಬಂದಿದೆ. ಭಾರತಕ್ಕಿಂತಲೂ ಚಿಕ್ಕದಾಗಿರುವ ಬೇರೆ ಕೆಲವು ದೇಶಗಳು ಮುಂದೆ ಇವೆ. ಇದಕ್ಕೆ ಕಾರಣ ಭಾರತದ ಕ್ರೀಡಾ ಕ್ಷೇತ್ರದಲ್ಲಿ ಎಲ್ಲವೂ ಸಮಾಧಾನಕರವಾಗಿಲ್ಲ. ನಮ್ಮ ದೇಶದಲ್ಲಿ ಇನ್ನೂ ಕ್ರೀಡೆಯ ಬಗ್ಗೆ ಅನಾಸಕ್ತಿಯಿದೆ, ಅದರಲ್ಲಿಯೂ ಹುಡುಗಿಯರಿಗೆ ಪ್ರೋತ್ಸಾಹ ಬಹಳ ಕಡಿಮೆ ಇದೆ. ಶಾಲೆ-ಕಾಲೇಜುಗಳಲ್ಲಿ ದೊರೆಯುವ ಕ್ರೀಡಾಶಿಕ್ಷಣ ಕೇವಲ ಕಾಟಾಚಾರ

೬ ನೇ ಪುಟ ನೋಡಿ

ವಾಜಪೇಯಿಯವರ ಅಮೇರಿಕಾ ಯಾತ್ರೆ ಫಲಪ್ರದವೆ ?

– ಸುರೇಂದ್ರ ಕೌಲಗಿ

ಶ್ರೀ ವಾಜಪೇಯಿಯವರ ಅಮೆರೀಕದ ಯಾತ್ರೆಯನ್ನು ಒಂದು ಯಶಸ್ವೀ ಯಾತ್ರೆಯೆಂದು ಸರ್ಕಾರದ ಮೂಲಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಬಣ್ಣಿಸಲಾಗುತ್ತಿದೆ. ಇದಕ್ಕೆ ಕಾರಣ ಬ್ರಹ್ಮಪುತ್ರದ ಪ್ರವಾಹದೋಪಾದಿಯಲ್ಲಿ ಅಮೆರಿಕದ ಡಾಲರ್ ಭಾರತಕ್ಕೆ ಹರಿದುಬರಲಿದೆ ಎಂಬ ಬೆಳವಣಿಗೆಗಾಗಿ. ಇನ್ನು ಮುಂದೆ ಭಾರತವು ಅಮೇರಿಕದ ದೊಡ್ಡ ಹಾಗೂ ಮುಕ್ತ ಮಾರುಕಟ್ಟೆಯಾಗಲಿದೆ. ಐದು ತಿಂಗಳ ಹಿಂದೆ ಕ್ಲಿಂಟನ್ನರ ಭಾರತ ಯಾತ್ರೆ ಮತ್ತು ಈಗ ವಾಜಪೇಯಿಯವರ ಅಮೇರಿಕಾ ಯಾತ್ರೆ ಈ ಎರಡು ದೇಶಗಳನ್ನು ಈ ಹಿಂದಿದ್ದುದಕ್ಕಿಂತ ಹೆಚ್ಚು ಹತ್ತಿರ ಹಾಗೂ ಬಲಿಷ್ಠ ಸಂಬಂಧಕ್ಕೆ ಕಾರಣವಾಗಿವೆ. ಅಮೇರಿಕಾ ಹಳೆಯ ಪ್ರಜಾತಂತ್ರ ದೇಶವಾದರೆ, ಭಾರತ ಹೊಸ ಪ್ರಜಾತಂತ್ರ ದೇಶ. ಆದರೆ ದುರ್ದೈವದ ಮಾತೆಂದರೆ ಇವೆರಡು ದೇಶಗಳ ಸಂಬಂಧದಲ್ಲಿ ಪ್ರಜಾತಂತ್ರದ ಮೂಲ ಗುಣಗಳಾದ ಸಮಾನತೆ ಮತ್ತು ಸ್ವಾತಂತ್ರ್ಯಗಳೇ ಮಾಯವಾಗಿರುವುದು ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಆರ್ಥಿಕ ಅಸಮತೋಲನಕ್ಕೆ ಕಾರಣವಾಗಿರುವುದು. ವಾಜಪೇಯಿಯವರ ಅಮೇರಿಕಾ ಯಾತ್ರೆಯ ಆರ್ಥಿಕ ಫಲಶ್ರುತಿಗಳು ಭಾರತದ ಆತ್ಮಗೌರವವನ್ನು ಮಾರಿವೆ. ಇದು ೨೧ ನೇ ಶತಮಾನದ ಭಾರತದ ದುರಂತ.

ವಾಜಪೇಯಿಯವರ ಎರಡು ವಾರಗಳ ಅಮೇರಿಕಾ ಯಾತ್ರೆ ಭಾರತದ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಅನುಕೂಲಕರವಾಗಿಯೇನೂ ಪರಿಣಮಿಸಿಲ್ಲ. ಭಾರತ ಮತ್ತು ಅಮೆರಿಕಾದ ಮಧ್ಯೆ ಆದ ಐದು ವಾಣಿಜ್ಯ ಒಪ್ಪಂದಗಳಲ್ಲಿ ಮುಖ್ಯವಾದುದು ಅಮೆರಿಕಾದ ಆಮದು-ರಫ್ತು ಬ್ಯಾಂಕ್ ಆ ದೇಶದಲ್ಲಿ ತಯಾರಾದ ಉತ್ಪನ್ನಗಳನ್ನು ಖರೀದಿಸಲು ಭಾರತಕ್ಕೆ ೯೦೦ ದಶಲಕ್ಷ ಡಾಲರ್ ಸಾಲವನ್ನು ನೀಡುವುದು. ಇದಲ್ಲದೆ ಭಾರತದಲ್ಲಿ ವಿದ್ಯುತ್ ತಯಾರಿಸಲು ಕೊಡಮಾಡಿರುವ ಸಾಲದ ದೊಡ್ಡ ಪ್ರಮಾಣವೇ ಇದೆ. ಒಟ್ಟಾರೆ ಆರು ಬಿಲಿಯನ್ ಡಾಲರ್‌ನಷ್ಟು ಈ ಹಣದ ವಹಿವಾಟು ಇದೆ. ಭಾರತದಲ್ಲಿ ಈಗಾಗಲೇ ವಿಶ್ವೀಕರಣದ ಫಲವಾಗಿ ಅನೇಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ದುಷ್ಪರಿಣಾಮಗಳು ಆಗುತ್ತಿವೆ. ಹೊರ ದೇಶಗಳಿಂದ ಆಮದಾಗುತ್ತಿರುವ ಎಲ್ಲ ಪ್ರಕಾರದ ಪದಾರ್ಥಗಳಿಂದ ನಮ್ಮ ದೇಶದಲ್ಲಿ ಉತ್ಪಾದಿತವಾಗುತ್ತಿರುವ

ಪದಾರ್ಥಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಬೆಲೆ ಸಿಗದೆ ಅವುಗಳನ್ನು ಉತ್ಪಾದಿಸುವವರು ಕೈಬಾಯಿ ಸುಟ್ಟುಕೊಳ್ಳುತ್ತಿದ್ದಾರೆ. ಅದರ ಪರಿಣಾಮವಾಗಿ ಅನೇಕ ಸಣ್ಣ ಕೈಗಾರಿಕೆಗಳು ಮತ್ತು ಕೆಲವು ದೊಡ್ಡ ಕೈಗಾರಿಕೆಗಳು ತಮ್ಮ ಕೊನೆ ಉಸಿರನ್ನು ಎಳೆಯುತ್ತಿವೆ. ಸಾರ್ವಜನಿಕ ಕ್ಷೇತ್ರದಲ್ಲಿರುವ ಶೇಕಡಾ ೬೦ ರಷ್ಟು ಕೈಗಾರಿಕೆಗಳು ಮಾರಾಟಕ್ಕಿವೆ ಇಲ್ಲವೆ ಅಂತಿಮವಾಗಿ ಮುಚ್ಚಿಹೋಗುವ ಹಂತದಲ್ಲಿವೆ. ಈ ಎಲ್ಲ ಕೈಗಾರಿಕೆಗಳ ಮಾರಾಟದಿಂದ ೨೦೦೦ ಕೋಟಿಗೂ ಮೀರಿ ಹಣವನ್ನು ಪಡೆಯುವ ನಿರೀಕ್ಷೆಯನ್ನು ೧೯೯೯-೨೦೦೦ ನೇ ಸಾಲಿನ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕಾಣಿಸಲಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿಯ ಈ ಹಿನ್ನಡೆಯ ಕಾರಣದಿಂದ ನಿರುದ್ಯೋಗ ಸಮಸ್ಯೆ ಬೆಳೆಯುತ್ತಿದೆ. ಕಂಪ್ಯೂಟರ್, ಮಾಹಿತಿ ತಂತ್ರಜ್ಞಾನ ಅತಿಯಾದ ಹಣಸಂಪಾದನೆಯ ದಾರಿಯಾಗಿವೆಯೇ ಹೊರತು ದೇಶದ ಎಲ್ಲ ಸಾಮಾಜಿಕ ವರ್ಗಗಳ ಹಿತಕರವಾದ ಬೆಳವಣಿಗೆಗೆ ಸಹಾಯಕವಾಗುತ್ತಿಲ್ಲವೆಂಬುದು ಸೂರ್ಯನ ಬೆಳಕಿನಷ್ಟೆ ಸ್ಪಷ್ಟವಾಗುತ್ತಿದೆ. ದೇಶದ ಒಟ್ಟಾರೆ ತಲಾ ಆದಾಯ ಹೆಚ್ಚುತ್ತಿರುವಂತೆ ಕಂಡುಬರುತ್ತಿದ್ದರೂ ಕೆಳಹಂತದಲ್ಲಿ ಭಯಾನಕವಾದ ಆರ್ಥಿಕ ವಿಷಮತೆ ಹೆಚ್ಚುತ್ತಿರುವುದು ನಗ್ನ ಸತ್ಯವಾಗಿದೆ. ಒಂದು ಹೊಳೆಯ ಸರಾಸರಿ ಆಳವನ್ನು ನೋಡಿ ಅದನ್ನು ದಾಟಲು ಹೋಗಿ ಮುಳುಗಿ ಹೋದ ಪಂಡಿತನಂತೆ ನಮ್ಮ ದೇಶದ ಅರ್ಥತಜ್ಞರ ಆರ್ಥಿಕ ನೀತಿಯಾಗಿದೆ. ಪರಿಸ್ಥಿತಿ ಹೀಗಿರುವಾಗ ಈಗ ಇರುವ ಅಲ್ಪ ಸ್ವಲ್ಪ ಪ್ರಮಾಣದ ದೇಶೀಯ ವಸ್ತುಗಳ ಉತ್ಪಾದನೆ ಮತ್ತು ದೇಶೀಯ ಪುರುಷಾರ್ಥವು ಪೂರ್ಣವಾಗಿ ನಶಿಸಿಹೋಗಲು ಸಾಧ್ಯವಾಗುವಂತೆ ಅಮೆರಿಕದ ಪದಾರ್ಥಗಳನ್ನು ಖರೀದಿಸಲು ಅಮೆರಿಕದ ಬ್ಯಾಂಕಿನಿಂದಲೇ ಸಾಲ ಪಡೆಯುವ ಕೆಲಸವನ್ನು ನಮ್ಮ ಪ್ರಧಾನಿ ವಾಜಪೇಯಿಜಿ ಮಾಡಿಕೊಂಡು ಬಹಳ ಹೆಗ್ಗಳಿಕೆಯೊಂದಿಗೆ ಭಾರತಕ್ಕೆ ಹಿಂದಿರುಗಿದ್ದಾರೆ. ಅಮೇರಿಕಾದ ಅವರ ಭೇಟಿಯ ಸಂದರ್ಭದಲ್ಲಿ ಮಾಡಿಕೊಳ್ಳಲಾಗಿರುವ ಒಪ್ಪಂದಗಳ ಪರಿಣಾಮವನ್ನು ೭೦ ರ ಇಳಿವಯಸ್ಸಿನಲ್ಲಿರುವ ವಾಜಪೇಯಿ ಅನುಭವಿಸಲಿಕ್ಕಾಗಲೀ, ನೋಡುವುಕ್ಕಾಗಲೀ ಇರುವುದಿಲ್ಲ. ಅನುಭವಿಸಬೇಕಾದವರು ಈಗ ಬಹಳ ಸಣ್ಣ ಪ್ರಾಯದಲ್ಲಿರುವ ಭಾರತದ ಮಕ್ಕಳು ಮತ್ತು ಮುಂದೆ ಬರಲಿರುವ ಹೊಸ ಮಕ್ಕಳು.

ವಾಜಪೇಯಿಯವರ ಅಮೆರಿಕಾ ಯಾತ್ರೆ, ಭಾರತ-ಪಾಕಿಸ್ತಾನ ಸಮಸ್ಯೆಯ ಪರಿಹಾರಕ್ಕೂ ಯಾವುದೇ ರೀತಿಯಲ್ಲಿ ಸಹಕಾರಿಯಾಗಿಲ್ಲ. ತಾವು ಹೋದಕಡೆಗೆಲ್ಲ- ಅದು ವಿಶ್ವರಾಷ್ಟ್ರ ಸಂಸ್ಥೆಯನ್ನು ಉದ್ದೇಶಿಸಿ ಮಾತನಾಡುವ ಸಂದರ್ಭ ಇರ

ಬಹುದು, ಅಮೇರಿಕದ ಕಾಂಗ್ರೆಸ್ ಸದಸ್ಯರನ್ನು ಉದ್ದೇಶಿಸಿ ಮಾತನಾಡುವ ಸಂದರ್ಭ ಇರಬಹುದು. ಅಥವಾ ಅವರ ಗೌರವಾರ್ಥವಾಗಿ ಕ್ಲಿಂಟನ್ ಏರ್ಪಡಿಸಿದ್ದ ಭೋಜನಕೂಟವಾಗಿರಬಹುದು– ಕಾಶ್ಮೀರ ಸಮಸ್ಯೆ ಮತ್ತು ಪಾಕಿಸ್ತಾನದ ಗಡಿಯಾಚೆಯಿಂದ ಆಗುತ್ತಿರುವ ಭಯೋತ್ಪಾದಕ ಚಟುವಟಿಕೆಗಳ ಬಗ್ಗೆ ಮಾತ್ರ ಪ್ರಸ್ತಾಪಿಸುತ್ತಿದ್ದುದು ಅಲ್ಲಿಯ ಜನಕ್ಕೆ ಬೇಸರವನ್ನುಂಟು ಮಾಡಿರಲು ಸಾಧ್ಯ. ಕಳೆದ ಮಾರ್ಚ್ ತಿಂಗಳಲ್ಲಿ ಕ್ಲಿಂಟನ್ ಭಾರತಕ್ಕೆ ಬಂದಿದ್ದಾಗ "ಭಾರತ–ಅಮೇರಿಕಾಗಳ ದೂರದರ್ಶಿತ್ವ"ದ ಬಗ್ಗೆ ತಯಾರಿಸಿದ್ದ ಹೇಳಿಕೆಯು ಮರು ಪ್ರಸ್ತಾವನೆಯನ್ನು ವಾಜಪೇಯಿ ಮಾಡದೇ ಇದ್ದುದು ಒಂದು ದೊಡ್ಡ ದೋಷವಾಗಿ ಪರಿಣಮಿಸಿತು. ಅಲ್ಲದೆ, ಭಾರತವೆಂದರೆ ಕೇವಲ ಕಾಶ್ಮೀರ ಸಮಸ್ಯೆ ಒಂದೇ ಅಲ್ಲ. ಭಾರತ ೧೦೦ ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ. ತನ್ನದೇ ಆದ ಸಂಸ್ಕೃತಿಯನ್ನು ಹೊಂದಿರುವ ದೇಶ. ಮಹಾತ್ಮಾ ಗಾಂಧಿಯಂಥ ಸತ್ಯ ಮತ್ತು ಅಹಿಂಸೆಯ ಆರಾಧಕನನ್ನು ಹೊಂದಿದಂಥ ದೇಶ. ಪ್ರಪಂಚವು ಭಾರತದತ್ತ ವಿಶಿಷ್ಟ ನಾಯಕತ್ವಕ್ಕಾಗಿ ನೋಡುತ್ತಿವೆ. ಹೀಗಿರುವಾಗ ವಾಜಪೇಯಿಯವರ ಯಾವ ಭಾಷಣದಲ್ಲೂ ಭಾರತೀಯ ಜನಕೋಟಿಯ ಆಶೋತ್ತರಗಳು, ಅವರ ಕನಸುಗಳು, ಅವರ ಸಾಮರ್ಥ್ಯಗಳು, ಅವರ ಸ್ವಾಭಿಮಾನ ಮುಂತಾದ ಯಾವ ವಿಷಯಗಳೂ ಪ್ರಮುಖವಾಗಿ ಪ್ರಸ್ತಾಪಿಸಲ್ಪಡದೇ ಇರುವುದು ಸಹ ಒಂದು ಲೋಪವಾಗಿ ಪರಿಣಮಿಸಿತು.

ಪ್ರಪಂಚದಲ್ಲಿಯ ಎಲ್ಲ ಪ್ರಜಾಸತ್ತಾತ್ಮಕ ದೇಶಗಳು ಒಟ್ಟಿಗೆ ಸೇರಿ ರಚಿಸಿಕೊಂಡಿರುವ ಅನೌಪಚಾರಿಕ ಸಂಘಟನೆಯ ನೇತೃತ್ವವನ್ನು ಭಾರತವು ವಹಿಸಿ ಕೊಳ್ಳಬೇಕೆಂದು ಅಮೇರಿಕಾ, ಪೋಲಂಡ್ ಮತ್ತು ಇತರ ದೇಶಗಳು ಮಾಡಿದ ಮನವಿಯನ್ನು ಭಾರತ ತಿರಸ್ಕರಿಸಿದ್ದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಯೋಚಿಸಬೇಕಾಗಿದೆ. ಸುಮಾರು ೧೦೦ ಪ್ರಜಾಸತ್ತಾತ್ಮಕ ದೇಶಗಳಿರುವ ಈ ಸಂಘಟನೆ ವಾರ್ಸಾದಲ್ಲಿ ಸ್ಥಾಪಿತವಾದಾಗ ಭಾರತವು ಸಹ ಆ ಸಮ್ಮೇಳನದ ಸಂಚಾಲಕರಲ್ಲಿ ಒಂದಾಗಿತ್ತು ಮತ್ತು ಕಳೆದ ಜೂನ್ ತಿಂಗಳಲ್ಲಿ ಪೋಲಂಡ ಏರ್ಪಡಿಸಿದ್ದ ಸಮ್ಮೇಳನಕ್ಕೂ ಸಹ ಸಹ–ಸಂಚಾಲಕವಾಗಿತ್ತು. ಆದರೆ ಈಗ ಫ್ರಾನ್ಸ್ ದೇಶಕ್ಕೆ ಆ ಸಂಘಟನೆಯ ಬಗ್ಗೆ ತನ್ನದೇ ಆದ ಕೆಲವು ಅಭಿಪ್ರಾಯಗಳಿರುವುದನ್ನು ಗಮನಿಸಿದ ಭಾರತ ಆ ಸಂಘಟನೆಯ ನೇತೃತ್ವವನ್ನು ವಹಿಸಿಕೊಳ್ಳಲು ಹಿಂಜರಿದಿರಬೇಕು. ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳಿಯಲ್ಲಿ ಸ್ಥಾನವನ್ನು ಅಪೇಕ್ಷಿಸುತ್ತಿರುವ ಭಾರತವು ಪ್ರಪಂಚದ ಪ್ರಜಾಪ್ರಭುತ್ವ ದೇಶಗಳ ನಾಯಕತ್ವವನ್ನು ವಹಿಸಿಕೊಳ್ಳಲು ಮುಂದೆ ಬರದೇ

ಇದ್ದುದು ವಿಷಾದಿಸಬೇಕಾದ ಸಂಗತಿ. ಈ ಬಗ್ಗೆ ವಾಜಪೇಯಿಯವರಿಂದ ಯಾವುದೇ ಸ್ಪಷ್ಟೀಕರಣ ಇದು ವರೆಗೂ ಬಂದಿಲ್ಲ. ವಿರೋಧ ಪಕ್ಷಗಳೂ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿಲ್ಲ.

ಹೊರ ದೇಶಕ್ಕೆ ಹೋದಾಗ ಒಂದು ದೇಶದ ಪ್ರಧಾನಮಂತ್ರಿ ನಡೆದುಕೊಳ್ಳಬೇಕಾದ ರೀತಿಯಲ್ಲಿ ನಡೆದುಕೊಳ್ಳಲು ವಾಜಪೇಯಿ ಯವರು ಎಡವಿದರೆಂದು ಹೇಳಬೇಕಾಗುತ್ತದೆ. ದೂರದ ಅಮೇರಿಕೆ ಯಲ್ಲಿ ತಮ್ಮ ಪಕ್ಷದ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಭಾವ ವಲಯದಲ್ಲಿ ಸಂಘಟಿತಗೊಂಡ ಸಮಾರಂಭದಲ್ಲಿ ಭಾಗವಹಿಸಿ ಸ್ವದೇಶ ದಲ್ಲಿ ಮಾಡುವಂಥ ರಾಜಕೀಯ ಭಾಷಣ ಮಾಡಿದ್ದು ಉಚಿತವೆನಿಸುವುದಿಲ್ಲ.

ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ವಾಜಪೇಯಿಯವರ ಅಮೇರಿಕಾ ಯಾತ್ರೆ ಅವರಾಗಲೀ, ಅವರ ಸರ್ಕಾರದ ವಕ್ತಾರರಾಗಲೀ ಹೇಳಿಕೊಳ್ಳುವಷ್ಟು ಐತಿಹಾಸಿಕವೂ ಸಾರ್ಥಕವೂ, ಆಗಿಲ್ಲ.

ಜನಪದ ಸಂಗತಿಯಿಂದ

ದ್ದಾಗಿದೆ. ಇದೆಲ್ಲವನ್ನೂ ಮೀರಿಸುವ ಕ್ಷುದ್ರ ರಾಜಕೀಯ ದೊಡ್ಡದಾಗಿ ಕೆಲಸ ಮಾಡುತ್ತಿದೆ. ಕ್ರೀಡಾ ಕ್ಷೇತ್ರದಲ್ಲೂ ಭ್ರಷ್ಟಾಚಾರ ತನ್ನ ಕ್ರೀಡೆಯನ್ನು ಬಿಟ್ಟಿಲ್ಲ. ಈ ಪ್ರಕಾರದ ಎಲ್ಲ ಅಡೆತಡೆಗಳನ್ನು ಹಾರಿ ಓಡಬಹುದಾದ ಕ್ರೀಡಾಪಟುಗಳು ದೊರೆಯುವುದು ಕಷ್ಟಸಾಧ್ಯವಾಗಿದೆ. ಇಂದು ಕೆಲವರಾದರೂ ಕ್ರೀಡಾ ಕ್ಷೇತ್ರದಲ್ಲಿ ಮುಂದೆ ಬಂದಿದ್ದರೆ ಅದು ಹೆಚ್ಚಾಗಿ ಆಯಾ ಕ್ರೀಡಾ ಪಟುವಿನ ಸ್ವಂತ ಪರಿಶ್ರಮ ಹಾಗೂ ಛಲ ಕಾರಣವಾಗಿದೆಯೇ ಹೊರತು ಸಮುದಾಯದ ಪ್ರೋತ್ಸಾಹವಲ್ಲ. ಎಲ್ಲಿಯ ವರೆಗೆ ಕ್ರೀಡಾ ಕ್ಷೇತ್ರಕ್ಕೆ ನ್ಯಾಯೋ ಚಿತವಾದ ಪ್ರೋತ್ಸಾಹ ಮತ್ತು ಮನ್ನಣೆ ದೊರೆಯುವುದಿಲ್ಲವೋ ಅಲ್ಲಿಯವರೆಗೆ ಭಾರತ ಕರ್ಣಂ ಮಹೇಶ್ವರಿಯಂಥವರ ಮೂಲಕ ಅಪರೂಪವಾಗಿ ದೊರೆಯುವ ಕಂಚಿನ ಪದಕದ ಮೂಲಕವೇ ತೃಪ್ತಿಪಡಬೇಕಾಗಿದೆ. ಚಿನ್ನದ ಪದಕ ಭಾರತದಿಂದ ಇನ್ನೂ ದೂರದಲ್ಲಿಯೇ ಇದೆ.ಮಹೇಶ್ವರಿಯ ಸಾಧನೆ ಸಧ್ಯಕ್ಕಂತೂ ಕ್ರೀಡಾ ಕ್ಷೇತ್ರದ ದಿಂಗತದಲ್ಲಿ ಮಿಂಚಿನಂತೆ ಮಿನುಗಿರುವ ಉತ್ತಮ ಭವಿಷ್ಯದ ಸಂಕೇತವಾಗಿದೆ.

ಶಿಕ್ಷಣ ವಿಚಾರಧಾರೆ

ಕೈಗೆಲಸದ ಶಿಕ್ಷಣದಿಂದ ಸಂಪತ್ತು

– ಆಚಾರ್ಯ ಕೃಪಲಾನಿ

(ಶಿಕ್ಷಣ ಕ್ಷೇತ್ರ ಎಂದಿನಿಂದಲೂ ವಿಮರ್ಶೆಗೆ ಒಳಗಾಗುತ್ತ ಬಂದಿರುವಂಥದು. ಶಿಕ್ಷಣವು ಅನ್ನ ಕಾಯಕದ ಸುತ್ತ ಇಗಬೇಕೆಂಬ ಗಾಂಧೀಜಿಯವರ ವಿಚಾರದ ಬೆಳವಣಿಗೆಯನ್ನು ಕೃಪಲಾನಿಯವರು ಇಲ್ಲಿ ದಾಖಲಿಸಿದ್ದಾರೆ. ಗುರಿ ಮತ್ತು ಗುರು ಇಲ್ಲದ ಇಂದಿನ ಶಿಕ್ಷಣ ಪದ್ಧತಿಗೆ ವಿರುದ್ಧವಾಗಿ ಅನ್ನಕಾಯಕದ ಶಿಕ್ಷಣವು ಇಂದಿಗೂ ಪ್ರಸ್ತುತವಾಗಿದೆಯೆಂಬುದು ೬೨ ವರ್ಷಗಳ ಹಿಂದೆ ೧೯೩೮ ರಲ್ಲಿ ಗಾಂಧೀಜಿ ಹೇಳಿದ್ದರೆಂಬುದು ಆ ವಿಚಾರದ ಆಕರ್ಷಣೆ. ಇಲ್ಲಿ ಆ ವಿಚಾರಗಳನ್ನು ಕ್ರಮಶಃ ಕೊಡಲಾಗುತ್ತಿದೆ. ಇದು ನಾಲ್ಕನೇಯ ಕಂತು ಸಂ.)

ಶಿಕ್ಷಣದಲ್ಲಿ ಸುಧಾರಣೆ ಮಾಡಬಯಸಿದ ಸುಧಾರಕರು ಬರೀ ತಾತ್ವಿಕರಲ್ಲ. ಅವರು ಸಾಮಾಜಿಕ-ರಾಜಕೀಯ ಸುಧಾರಣೆಗಳ ದೃಷ್ಟಿಯಿಂದ ಶಿಕ್ಷಣವನ್ನು ನೋಡಿದಾರೆ. ತಾವೇ ಕೆಲವು ಪ್ರಯೋಗ ಮಾಡಿದಾರೆ. ಸಂಸ್ಥೆಗಳನ್ನು ಕಟ್ಟಿ ನಡೆಸಿದಾರೆ. ಬೇರೆ-ಬೇರೆ ಸಿದ್ಧಾಂತಗಳನ್ನು ನಂಬಿದ ಬೇರೆ ಬೇರೆ ವಿಚಾರ ಪಂಥದ ಜನ ಅವರು. ಕೆಲವರಿಗೆ ವ್ಯಕ್ತಿಯ, ಜಾತಿಯ, ಆಧ್ಯಾತ್ಮಿಕ ಆಗು ಹೋಗುಗಳ ಕಡೆ ದೃಷ್ಟಿ. ಕೆಲವರು ಐಹಿಕವಾದಿಗಳು, ಸಮಾಜವಾದಿಗಳು. ಅವರಿಗೆ ಕೆಲಸಗಾರರ ಚಿಂತೆ, ಕ್ರಾಂತಿಯನ್ನು ಮಾಡಿ ವರ್ಗರಹಿತ ಸಮಾಜವನ್ನು ರಚಿಸುವ ಚಿಂತೆ. ಶಿಕ್ಷಣವು ಅದಕ್ಕೆ ಹೊಂದಿಕೊಳ್ಳಬೇಕು. ಇನ್ನು ಕೆಲವರಿಗೆ ಯಾವ ಒಂದು ತತ್ವವೂ ಸಂಬಂಧವಿಲ್ಲ. ಈಗಿನ ವ್ಯವಸ್ಥೆಯನ್ನು ತಲೆ ಕೆಳಗೆ ಮಾಡುವ ಕ್ರಾಂತಿಯ ಹಂಬಲವೂ ಇಲ್ಲ; ಆದರೆ ಶಿಕ್ಷಣ ವಿಜ್ಞಾನ ಸಮ್ಮತವಾಬೇಕು, ಮಕ್ಕಳ ಸ್ವಭಾವಕ್ಕೆ, ಹರೆಯದ ಮನೋಧರ್ಮಕ್ಕೆ ಹೆಚ್ಚು ಹೊಂದಿಕೊಳ್ಳುವಂತಾಗಬೇಕು ಎಂಬ ಆಸೆ. ಜ್ಞಾನಾರ್ಜನೆ, ಪ್ರಸಾರ, ಪ್ರಗತಿಗಳು ಹೆಚ್ಚು ದಕ್ಷವೂ, ಸ್ವಾಭಾವಿಕವೂ, ಫಲಪ್ರದವೂ ಆಗಬೇಕು – ಇದು ಅವರ ಗುರಿ. ಯಾವ ವಿಚಾರಪಂಥ,ದ ಶಿಕ್ಷಣತತ್ವದವರೇ ಆಗಲಿ ಎಲ್ಲಾ ಶಿಕ್ಷಣ ಸುಧಾರಕರೂ ಒಂದು ಮಾತನ್ನು ಒಪ್ಪಿದಾರೆ. ಶಿಕ್ಷಣ ಹೆಚ್ಚು ವಾಸ್ತವ, ಪ್ರತ್ಯಕ್ಷ ಆಗಬೇಕು; ಬರೀ ಮಾತಿನ ತಾತ್ವಿಕ ರೀತಿ ತಗ್ಗಬೇಕು. ಪ್ರಯೋಗ ಪ್ರಯತ್ನಗಳ ಪದ್ಧತಿಯನ್ನು ಎಲ್ಲರೂ ಪ್ರತಿಪಾದಿಸುತ್ತಾರೆ. ಪ್ರಯೋಗಶಾಲೆಯಲ್ಲಾಗಲೀ ಕರ್ಮಾಲಯದಲ್ಲಾಗಲಿ ಪ್ರತ್ಯಕ್ಷ ರಚನಾತ್ಮಕಕಾರ್ಯ ಮುಖ್ಯ ಎಂದು ಎಲ್ಲರೂ ಒತ್ತಿ ಹೇಳುತ್ತಾರೆ.

ಆಧ್ಯಾತ್ಮ ದೃಷ್ಟಿಯಿಂದ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾಗಬೇಕೆಂಬ ಜರ್ಮನಿಯ ರೋಮನ್ ಕ್ಯಾಥೋಲಿಕ್ ಲೇಖಕನೊಬ್ಬ "ದಿನದಿನಕ್ಕೂ

ಈ ಕೈಗೆಲಸದ ಪಾಠಶಾಲೆಯ ಸ್ವರೂಪ ಹೆಚ್ಚು ಸ್ಪಷ್ಟವಾಗುತ್ತಿದೆ. ಈ ಸುಧಾರಣೆಯನ್ನು ವಿರೋಧಿಸುವುದು ಬರೀ ಹುಚ್ಚು ಎಂಬುದು ತಿಳಿಯುತ್ತಿದೆ. ಪ್ರತಿಯೊಂದು ಯುಗವೂ ನಾಗರೀಕತೆಯನ್ನು ಹೊಸ ಹೊಸ ರೂಪಿನಲ್ಲಿ ಎರಕ ಹೊಯ್ಯುತ್ತದೆ. ಧರ್ಮಕ್ಕೂ ಜೀವನಕ್ಕೂ; ಧರ್ಮಕ್ಕೂ ಉದ್ಯೋಗಕ್ಕೂ, ಧರ್ಮಕ್ಕೂ ತನ್ನ ನಾಡಿನ ಜ್ಞಾನಕ್ಕೂ ಸಂಬಂಧವಿರಬೇಕು ಎಂದು ಕೇಳುತ್ತಿದೆ ಈ ಯುಗ. ಕೆಲಸದ ಮೂಲಕ ಶಿಕ್ಷಣ ಸಿಗಬೇಕು. ನಮ್ಮ ನಾಡಿನ ಹಳ್ಳಿಯ ಶಾಲೆಗಳಿಗೆ ಜೀವ ಬರಬೇಕು ಎಂದಿದಾನೆ.

ಇತ್ತಕಡೆ ಕುಷನ್ ಸ್ಟೇಯಿನೇ ಎಂಬ ಜರ್ಮನ್ ತತ್ವಶಾಸ್ತ್ರಜ್ಞನೊಬ್ಬ ಇದಾನೆ. ಮ್ಯೂನಿಚ್ ನಗರದ ಸಾರ್ವಜನಿಕ ಶಿಕ್ಷಣದ ವ್ಯವಸ್ಥಾಪಕ. ಅವನಿಗೆ ಧರ್ಮದ ಸಂಬಂಧವೇ ಇಲ್ಲ. ಎಲ್ಲಾ ಜರ್ಮನ್ ತತ್ವಜ್ಞರಂತೆ ರಾಜ್ಯ ಪ್ರಜಾ ಧರ್ಮಗಳ ದೃಷ್ಟಿ. ಅವನ ಅಭಿಪ್ರಾಯದಲ್ಲಿ ಪ್ರಾಥಮಿಕ ಶಾಲೆಯ ಮಗುವಿನ ಎಳೆ ವಯಸ್ಸಿನಲ್ಲಿ ಶಾರೀರಿಕ ಕಾರ್ಯವೇ ಮುಖ್ಯ ಲಕ್ಷಣ. "ಆದುದರಿಂದ ವೃತ್ತಿಶಿಕ್ಷಣದಲ್ಲಿ ಶರೀರಶ್ರಮಕ್ಕೆ ಪ್ರಾಧಾನ್ಯತೆ ಕೊಡಬೇಕು. ಎಚ್ಚರಿಕೆಯಿಂದ, ಪ್ರಾಮಾಣಿಕತನದಿಂದ ಮತ್ತು ಗಂಭೀರವಾಗಿಯೂ ಪರಿಷ್ಕಾರವಾಗಿಯೂ ನಡೆಯಬೇಕು ಶರೀರಶ್ರಮ. ಹೀಗೆ ಕೈಯ್ಯಾರೆ ಕೆಲಸ ಮಾಡಲು ಒಂದು ಸಾಮಾಜಿಕ ವ್ಯವಸ್ಥೆ. ಅದರಲ್ಲಿ ಪರಸ್ಪರ ಸಹಕಾರ ಅಗತ್ಯ. ಸಹಜವಾಗಿಯೇ ಇದು ಮಗುವಿಗೆ ನೀತಿಯನ್ನೂ ಪೌರಧರ್ಮವನ್ನೂ ಕಲಿಸುತ್ತದೆ."

ಅಮೆರಿಕದ ತತ್ವಶಾಸ್ತ್ರಕರ್ತನಾದ ಜಾನ್‌ಡ್ಯೂಯಿ ಶಿಕ್ಷಣದ ತತ್ವವಿಚಾರಕ್ಕೆ ಮಹತ್ತರ ಕಾಣಿಕೆ ಸಲ್ಲಿಸಿದಾನೆ. ಶಿಕ್ಷಣ ಸುಧಾರಣೆಯ ಬಗ್ಗೆ ತನ್ನ ವಿಚಾರಗಳನ್ನು ಡ್ಯೂಯಿ ಈ ಮೂರು ಸೂತ್ರಗಳಲ್ಲಿ ಸಂಗ್ರಹಿಸಿದಾನೆ:

ಮೊದಲನೆಯದು, ಪ್ರತಿಯೊಬ್ಬ ವ್ಯಕ್ತಿಯೂ ಆತ್ಮಗೌರವಪೂರ್ಣವಾದ ಸ್ವಾವಲಂಬಿ ಬುದ್ಧಿಯುಕ್ತ ಕೆಲಸ ಮಾಡಲು ಸಮರ್ಥನಾಗಬೇಕು; ತನ್ನನ್ನು ಅವಲಂಬಿಸಿದವರ ಉದರಪೋಷಣೆಗಾಗಿ ಪ್ರತಿಯೊಬ್ಬನೂ ದುಡಿಯಬೇಕು; ತಾನು ಮಾಡುವ ಕೆಲಸವನ್ನು ಬುದ್ಧಿಯುಕ್ತವಾಗಿ ಚೆನ್ನಾಗಿ ಮಾಡಬೇಕೆಂಬ ಲವಲವಿಕೆಯಿರಬೇಕು.

ಎರಡನೆಯದು, 'ಒಬ್ಬೊಬ್ಬ ವ್ಯಕ್ತಿಯ ಕೆಲಸವೂ ಈಗ ಹಿಂದೆ ಎಂದೂ ಇಲ್ಲದಷ್ಟು ವಿಶಾಲ ಪ್ರಮಾಣದಲ್ಲಿ ಇತರರ ಯೋಗಕ್ಷೇಮಕ್ಕೆ ಸಂಬಂಧಿಸಿದೆ.

ಮೂರನೆಯದು ಔದ್ಯೋಗಿಕ ವಿಧಾನಗಳೂ, ಕ್ರಿಯೆಗಳೂ ಇಂದು ಎಂದಿಗಿಂತಲೂ ಹೆಚ್ಚಾಗಿ ಪ್ರಕೃತಿ ವಿಜ್ಞಾನ, ಸಮಾಜಶಾಸ್ತ್ರಗಳ ಜ್ಞಾನವನ್ನು ಅವಲಂಬಿಸಿವೆ. ನಮ್ಮ ರೈಲು, ಹಡಗು, ಕಾರಖಾನೆ, ಬೇಸಾಯ, ಮನೆಯ

ದಿನಬಳಕೆಯ ಸಲಕರಣೆಗಳು ಕೂಡ ಗಣಿತ, ಭೌತ ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರದ ದೃಷ್ಟಿಯಿಲ್ಲದೆ ಬದುಕಲಾರವು. ಸಾಮಾಜಿಕ ಜೀವನದ ಸತ್ಯಗಳನ್ನೂ, ಸಂಬಂಧಗಳನ್ನೂ ಅರಿತುಕೊಂಡರೇನೇ ಇವುಗಳ ಪರಮೋತ್ತಮ ಉಪಯೋಗ ಸಾಧ್ಯ. ತಾವು ಬಳಸುತ್ತಿರುವ ಪ್ರಾಕೃತಿಕ ಸಾಧನಗಳ ಹಿನ್ನೆಲೆ-ಮುನ್ನೆಲೆಗಳಲ್ಲಿನ ಭೌತಿಕ, ಸಾಮಾಜಿಕ ಸಂಗತಿಗಳನ್ನು ಸ್ವಲ್ಪವಾದರೂ ಅರಿತುಕೊಳ್ಳದಿದ್ದರೆ ಕೆಲಸಗಾರರು ಆ ಯಂತ್ರಗಳ ಕುರುಡು ಮೊಳೆ-ಮರಡು ಆದಾರು. ಮತ್ತೆ ಲೋಹದ ಕೆಲಸ, ಮರಗೆಲಸ, ನೇಯ್ಗೆ, ಹೊಲಿಗೆ, ಅಡಿಗೆ ಕೆಲಸಗಳನ್ನು ಬೇರೆ-ಬೇರೆ ವಿದ್ಯೆಗಳಂತೆ ಕಲಿಯಬಾರದು; ಜೀವನಕ್ರಮ, ಶಿಕ್ಷಣ ಪದ್ಧತಿ ಆಗಬೇಕು ಈ ಕೆಲಸ. ಇವಕ್ಕೊಂದು ಸಾಮಾಜಿಕ ಮಹತ್ವವಿದೆ. ಈ ವಿಧಾನಗಳಿಂದ ಸಮಾಜ ಸಾಗಿ ಬರುತ್ತಿದೆ; ಸಾಮಾಜಿಕ ಜೀವನದ ಪ್ರಾಥಮಿಕ ಅವಶ್ಯಕತೆಗಳ ಜ್ಞಾನವನ್ನೂ, ಮನುಷ್ಯನ ವಿಕಾಸಶೀಲ ದೃಷ್ಟಿ ಮತ್ತು ಜಾಣತನ ಹೇಗೆ ಆ ಅವಶ್ಯಕತೆಗಳನ್ನು ಪೂರೈಸಿತೆಂಬುದರ ಪರಿಚಯವನ್ನೂ ಮಕ್ಕಳಿಗೆ ಮಾಡಿಕೊಡುವ ಸಾಧನ ಇವು. ಹೀಗೆ ಭಾವಿಸಬೇಕು. ಪಾಠಶಾಲೆ ಬರೀ ಪಾಠ ಕಲಿವ ಸ್ಥಳವಾಗದೆ ಸಮಾಜ ಜೀವನದ ವಾಸ್ತವ ಪ್ರತೀಕವಾಗಬೇಕು."

ಬಹಳ ಹಿಂದಿನ ಕಾಲದಿಂದಲೂ ನಾನಾ ಬಗೆಯ ಸಮಾಜವಾದಿಗಳೆಲ್ಲರೂ ಒಳ್ಳೆಯ ಶಿಕ್ಷಣಕ್ಕೆ ಶ್ರಮ - ಕೆಲಸಗಳೇ ತಳಹದಿಯೆಂದು ಒಪ್ಪಿದಾರೆ.

ಮಾರ್ಕ್ಸ್ ಹೇಳಿದಾನೆ: ಶಿಕ್ಷಣವೆಂದರೆ ಇವು: ೧. ಬೌದ್ಧಿಕ ವಿಕಾಸ, ೨. ಶಾರೀರಿಕ ವಿಕಾಸ, ೩. ವಿವಿಧೋದ್ಯೋಗ ವಿಜ್ಞಾನ ಶಿಕ್ಷಣ. ಇದು ಸಮಸ್ತ ಉತ್ಪಾದನ ವಿಧಾನಗಳ ಸಾಮಾನ್ಯ ವೈಜ್ಞಾನಿಕ ಸೂತ್ರಗಳಿಗೆ ಸಂಬಂಧಿಸಿದ ಜ್ಞಾನವನ್ನೂ, ಸಾಧನಗಳನ್ನು ಉಪಯೋಗಿಸುವ ಅಭ್ಯಾಸವನ್ನೂ ತರುಣರಿಗೆ, ಮಕ್ಕಳಿಗೆ ಮಾಡಿಕೊಡಬೇಕು."

ರಾಜಕುಮಾರ ಕ್ರೊಪಾಟ್‌ಕಿನ್ ಕ್ರಾಂತಿಕಾರಿ ಲೇಖಕ. ಈಗಿನ ಶಿಕ್ಷಣ ಪದ್ಧತಿಯನ್ನು ಬದಲಿಸಬೇಕೆಂದು ವಾದಿಸುತ್ತ, 'ಸಮಾಜವನ್ನು ಕೈಗೆಲಸದವರು, ಬುದ್ಧಿಯ ಕೆಲಸದವರು ಎಂದು ಎರಡು ವಿಭಾಗ ಮಾಡಿ ಈ ಎರಡು ಬಗೆಯ ಕೆಲಸಗಳನ್ನು ಮೇಳಗೂಡಿಸುವುದು ತಪ್ಪು. ಅದನ್ನು ನಾವು ವಿರೋಧಿಸುತ್ತೇವೆ. ಈ ವರ್ಗೀಕರಣವನ್ನು ಸ್ಥಿರಗೊಳಿಸುವಂಥ ಈಗಿನ ಔದ್ಯೋಗಿಕ ಶಿಕ್ಷಣ ನಮಗೆ ಬೇಡ. ಈ ಸರ್ವನಾಶಕ ಭೇದವನ್ನು ತೊಡೆದುಹಾಕುವ ಸಮಗ್ರ ಶಿಕ್ಷಣ ನಮಗೆ ಸ್ಪಷ್ಟವಾಗಿ ಹೇಳುವುದಾದರೆ ಗುರಿ ಹೀಗಿರಬೇಕು: ೧೮ ಅಥವಾ ೨೦ ವರ್ಷಕ್ಕೆ ಹುಡುಗನೋ ಹುಡುಗಿಯೋ ಶಾಲೆ ಬಿಟ್ಟರೆ ವಿಜ್ಞಾನ ಕ್ಷೇತ್ರದಲ್ಲಿ

೧೬ನೇ ಪುಟ ನೋಡಿ

ಬೆಂಗಳೂರು ಮತ್ತು ರಾಜಕುಮಾರ್

– ವಿನೋದ್ ವ್ಯಾಸಲು

ರಾಜಕುಮಾರರನ್ನು ಕುರಿತು ಇಷ್ಟೆಲ್ಲ ಗಲಭೆ ಏಕೆ? ಅವರು ಅತ್ಯದ್ಭುತ ವ್ಯಕ್ತಿಯೆಂದೆ? ಒಂದು ವೇಳೆ ಅವರು ಹಾಗಿದ್ದರೂ ಎಷ್ಟು ಜನ ಅವರೊಂದಿಗೆ ಮಾತನಾಡಿದ್ದಾರೆ, ವ್ಯವಹರಿಸಿದ್ದಾರೆ? ನಿಜ ಸಂಗತಿಯೆಂದರೆ ಬಹಳ ತೀವ್ರವಾಗಿ ಕಣ್ಮರೆಯಾಗುತ್ತಿರುವ ಒಂದು ವಿಶೇಷ ಯುಗದ ಸಂಕೇತವಾಗಿ ರಾಜಕುಮಾರರನ್ನು ಸಾಮಾನ್ಯ ಜನ ನೋಡುತ್ತಿದ್ದಾರೆ. ಆ ಯುಗ ಯಾವುದು? ಅದು ಹಳೇ ಮೈಸೂರಿನ ಕಾಲ. ಸುಸಂಸ್ಕೃತರಾದ ಮಹಾರಾಜರು ಆಳುತ್ತಿದ್ದ ಕಾಲ. ದಕ್ಷ ಆಡಳಿತವಿದ್ದ ಕಾಲ. ವಿಶ್ವೇಶ್ವರಯ್ಯ, ಮಿರ್ಜಾರಂಥ ಜನಹಿತ ಸಾಧಿಸುವ ದಿವಾನರಿದ್ದ ಕಾಲ. ರಾಜಕುಮಾರ್ ತಮ್ಮ ಚಲನಚಿತ್ರಗಳಲ್ಲಿ ಈ ಯುಗದ ಎಲ್ಲ ಒಳ್ಳೆಯದನ್ನೂ ಬಿಂಬಿಸಿದರು. ಆಗ ಒಬ್ಬ ಸಾಮಾನ್ಯ ಮನುಷ್ಯನಿಗೂ ಮನ್ನಣೆಯಿತ್ತು; ಕೆಟ್ಟವರಲ್ಲದ ಶ್ರೀಮಂತರಿದ್ದರು; ದುರಂತಗಳಿದ್ದರೂ ನ್ಯಾಯವಿತ್ತು. ರಾಜಕುಮಾರ್ ತಮ್ಮ ವಿವಿಧ ಪಾತ್ರಗಳ ಮೂಲಕ -ಕಾರ್ಮಿಕನಾಗಿ, ರೈತನಾಗಿ, ಗುಮಾಸ್ತನಾಗಿ ಮತ್ತು ಇನ್ನೂ ಅನೇಕ ವಿಧವಾದ ಪಾತ್ರಗಳ ಮೂಲಕ – ಆ ಯುಗ ಬದುಕು ನಡೆಸಲು ಯೋಗ್ಯವಾಗಿತ್ತೆಂದು ತೋರಿಸಿದರು. ಅವರ ಹಾಡುಗಾರಿಕೆಯು ಅದ್ಭುತ ಸಾಮರ್ಥ್ಯದ ಪರಿಣಾಮವಾಗಿ ಕರ್ನಾಟಕದಲ್ಲಿ ವಾಸವಾಗಿರುವ ಪ್ರತಿಯೊಬ್ಬರಿಗೂ ಅವರ ಹಾಡಿದ ಹಾಡುಗಳ ರಾಗದ ಪರಿಚಯವಾಯಿತು. ಇದರೊಟ್ಟಿಗೆ ಸೇರಿದೆ ಅವರ ಮುಗ್ಧ ವ್ಯಕ್ತಿತ್ವ, ಅವರ ಸ್ನಿಗ್ಧ ಕನ್ನಡತನ ಮತ್ತು ಭಾಷಾಭಿಮಾನ, ರಾಜಕಾರಣದಿಂದ ಅವರ ದೂರ ಇರುವಿಕೆ, (ರಾಜ್ಯದಲ್ಲಿ ಕನ್ನಡ ಭಾಷೆಯ ಹಿರಿತನಕ್ಕಾಗಿ ನಡೆದ ಗೋಕಾಕ್ ಚಳುವಳಿಯಲ್ಲಿಯ ಪಾತ್ರದ ಹೊರತಾಗಿ) – ಇವೆಲ್ಲವೂ ಅವರೊಂದಿಗೆ ಸಾಮಾನ್ಯ ಮನುಷ್ಯನೂ ತನ್ನನ್ನು ಗುರುತಿಸಿಕೊಳ್ಳುವುದಕ್ಕೆ ಸಾಧ್ಯಮಾಡಿಕೊಟ್ಟಿವೆ. ಅವರ ಅಪಹರಣದಿಂದಾಗಿ ಆ ಯುಗದ ಭಾವನೆಗೆ ಏಟು ಬಿದ್ದಂತಾಗಿದೆ.

ಯಾವ ಯುಗದ ಪ್ರತಿನಿಧಿ ರಾಜಕುಮಾರ ಆಗಿದ್ದರೋ ಅದು ವೇಗವಾಗಿ ಕಣ್ಮರೆಯಾಗುತ್ತಿದೆ. ರಾಜಕುಮಾರ ತಮ್ಮ ಚಿತ್ರಗಳಲ್ಲಿ ಪ್ರತಿನಿಧಿಸುತ್ತಿದ್ದಂಥ ರಾಜಧಾನಿ ಬೆಂಗಳೂರು ಈಗ ಬಹಳಷ್ಟು ಬದಲಾಗುತ್ತಿರುವುದನ್ನೂ ಮತ್ತು ಆ ಹಳೆ ಯುಗದಿಂದ ಬಹಳ ದೂರ ಹೋಗುತ್ತಿರುವುದನ್ನೂ ಕಾಣಬಹುದಾಗಿದೆ ಕಳೆದ ದಶಕದಿಂದ ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿ ಉಳಿದಿಲ್ಲ, ಬದಲಿಗೆ ಅನಿವಾಸಿ ಭಾರತೀಯರ ವಿಶ್ವ ರಾಜಧಾನಿಯಾಗಿ

ಮಾರ್ಪಟ್ಟಿದೆ. ಹಳೆಯ ಮಾವಳ್ಳಿ ಟಿಫನ್ ರೂಂನಂಥ ಹೋಟೆಲ್‌ಗಳು ಮತ್ತು ಉತ್ಕೃಷ್ಟವಾದ ಆಹಾರದ ಬದಲಾಗಿ ಈಗ ಹೊಸದಾಗಿ ವಲಸೆ ಬಂದು ಇಲ್ಲಿ ನೆಲೆ ನಿಂತಿರುವ ಜನರು ಇನ್‌ಫೋಸಿಸ್ ಮತ್ತು ವಿಪ್ರೊ ಕಡೆಗೆ ನೋಡು ವಂತಾಗಿದೆ. ತಮ್ಮ ರಾಜಧಾನಿಯಲ್ಲಿಯೇ ಕನ್ನಡಿಗರು ಅಲ್ಪಸಂಖ್ಯಾತರಾದ ಪರಿಣಾಮವಾಗಿ ಕನ್ನಡ ಚಿತ್ರಗಳು ಎರಡನೇ ಸ್ಥಾನಕ್ಕೆ ಇಳಿದಿವೆ. ಹೊಸ ಉದ್ಯೋಗಗಳು ಮತ್ತು ಅವಕಾಶಗಳು ಎಲ್ಲಿಂದಲೋ ಬಂದ ಅಪರಿಚಿತ ಜನರ ಪಾಲಾಗಲು ಪ್ರಾರಂಭಿಸಿವೆ. ಎಂಥ ಸೌಮ್ಯ ಪ್ರವೃತ್ತಿಯ ಕನ್ನಡಿ ಗನೂ ತನ್ನ ಈ ದೀನತೆಯನ್ನು ಕುರಿತು ಅಸಮಾಧಾನ ವ್ಯಕ್ತಪಡಿಸುತ್ತಾನೆ.

ಇಂಥ ಮಾರ್ಪಾಡಿಗೆ ಒಂದು ಒಳ್ಳೆಯ ಉದಾಹರಣೆ ಅವಸರವಸರ ವಾಗಿ ಬೆಂಗಳೂರಿಗೆ ಬಂದ ಟೈಮ್ಸ್ ಆಫ್ ಇಂಡಿಯಾ ಎಂಬ ಇಂಗ್ಲೀಷ್ ಪತ್ರಿಕೆಯ ಏರುಮುಖ. ಕರ್ನಾಟಕದ ಸಂಸ್ಕೃತಿ ಮತ್ತು ಭಾಷೆಯಲ್ಲಿ ಯಾವುದೇ ರೀತಿಯ ಮೂಲವಿಲ್ಲದ, ಭದ್ರವಾಗಿ ಕಾಲೂರದೇ ಇರುವ, ಅಮೇರಿಕದ ಸಿಲಿ ಕಾನ್ ವ್ಯಾಲಿಗೆ ಪಾದಬೆಳೆಸಿರುವ ಮತ್ತು ಬೆಂಗಳೂರನ್ನು 'ಬಾರ್ – ಗೆಲೋರ್' ಆಗಿ ಪರಿವರ್ತಿಸುತ್ತಿರುವಂಥವರಾಗಿ ಬೆಂಗಳೂರಿಗೆ ಹೊಸದಾಗಿ ಬಂದವರ ಅಗತ್ಯವನ್ನು ಇದು ಪೂರೈಸುತ್ತಿದೆ. ಆ ಪತ್ರಿಕೆ ತನ್ನ ಕೊನೆಯ ಪುಟದಲ್ಲಿ ಇತ್ತೀಚೆಗೆ ವಲಸೆ ಬಂದಿರುವ ಶೋಭಾಡೇ, ದಿಲೀಪ್ ಠಾಕೂರ್ ಮತ್ತು ಇತರರನ್ನು ಬೆಂಗಳೂರಿನ ಪ್ರತಿಷ್ಠರೆಂದು ಹೇಳುತ್ತದೆಯೇ ಹೊರತು ರಾಜ್ ಮತ್ತು ಇತರ ಅಂಥವರ ಬಗ್ಗೆ ಮಾತನಾಡುವುದಿಲ್ಲ. ಇದರ ಅರ್ಥ ಅವರು ಕೆಟ್ಟ ಜನವೆಂದಲ್ಲ. ಆದರೆ ಅವರು ಯಾವ ಅರ್ಥದಲ್ಲಿ ಬೆಂಗಳೂರಿನವರು?

ಹಳೆಯ ಬೆಂಗಳೂರು ನಿವಾಸಿಗಳು ಹೊಸ ವಲಸೆ ನಿವಾಸಿಗಳನ್ನು ಗುರುತಿಸುವುದಾಗಲೀ, ಅವರೊಂದಿಗೆ ಸಂಬಂಧ ಬೆಳೆಸುವುದಾಗಲೀ ಮಾಡುವು ದಿಲ್ಲ. ಆದರೆ ಈ ಹೊಸ ಜನ ಶ್ರೀಮಂತರಾಗಿದ್ದಾರೆ. ಈ ಹೊಸಬರೇ ಅತ್ಯುತ್ತಮವಾದ ಉದ್ಯೋಗಗಳನ್ನು ಪಡೆಯುತ್ತಾರೆ. ಹೊಸಬರ ಈ ಪ್ರವೇಶ ದಿಂದಾಗಿ ಹಳಬರ ಸ್ಥಾನವು ಅವರಿಂದ ಆಕ್ರಮಿಸಿಕೊಳ್ಳಲ್ಪಡುತ್ತಿದೆ. ಹಳ ಬರ ಮಕ್ಕಳಿಗೆ ಒಳ್ಳೆಯ ಶಾಲೆಗಳಲ್ಲಿ ಪ್ರವೇಶಸಿಗುವುದು ಕಷ್ಟವಾಗುತ್ತಿದೆ. ಅವನು ಕೊಡಲಾಗದಷ್ಟು ಮನೆ ಬಾಡಿಗೆಗಳ ದರ ಏರುತ್ತಿದೆ. ತಮ್ಮ ನಗರ ದಲ್ಲಿಯೇ ತಮಗೆ ಉದ್ಯೋಗ ಸಿಗಲಾರದಂಥ ಪರಿಸ್ಥಿತಿ. ಪರಂಪರಾಗತವಾಗಿ ವಾಸಿಸಿಕೊಂಡು ಬಂದಿರುವವರಿಗೆ ಬೆಂಗಳೂರು ಹೊಸ ನಗರವಾಗಿ ಮಾರ್ಪಾಡು ಗೊಳ್ಳುತ್ತಿದೆ. ಅಲ್ಲಿ ಅವರ ಸ್ಥಳಾವಕಾಶ ದಿನೇ ದಿನೇ ಸಂಕುಚಿತವಾಗುತ್ತಿದೆ. ಅವರು ಹೊಸ ಅಪಾರ್ಟಮೆಂಟ್ಸ್ ಪಡೆಯಲಾರರು. ಅವರು ಪಬ್‌ಗಳನ್ನು, ಡಿಸ್ಕೋಗಳನ್ನು ತಿಳಿಯಲಾರರು. ತಮ್ಮ ನಗರದಲ್ಲಿ ಉಂಟಾಗುತ್ತಿರುವ

ಬದಲಾವಣೆಗಳಿಂದ ಭೀತಿಗೊಳ್ಳುತ್ತಿರುವ ಅವರು ರಾಜಕುಮಾರರ ಚಿತ್ರಗಳಲ್ಲಿ ತಮಗೆ ಬೇಕಾದ ಪರ್ಯಾಯ ಸ್ಥಿತಿಯನ್ನು ಕಾಣಬಯಸುತ್ತಾರೆ. ಆದರೆ ಆ ಪರ್ಯಾಯ ಸ್ಥಿತಿ ವೇಗವಾಗಿ ಅವರ ಹಿಡಿತದಿಂದ ಜಾರಿಹೋಗುತ್ತಿದೆ!

ರಾಜಕುಮಾರರನ್ನು ಅಪಹರಿಸಿಕೊಂಡು ಹೋಗುವುದೆಂದರೆ ಬೆಂಗಳೂರಿನ ಮೂಲನಿವಾಸಿಗಳ ಅಸ್ತಿತ್ವವನ್ನೇ ಕಸಿದುಕೊಂಡು ಹೋದಂತೆ. ಆದ್ದರಿಂದ ಸ್ವಾಭಾವಿಕವಾಗಿಯೇ ಅವರು ಹೀನಕೃತ್ಯಗಳ ಮೂಲಕ ಪ್ರತಿಕ್ರಿಯಿಸುತ್ತಾರೆ. ಆದ್ದರಿಂದ ಹೊಸ ಬದಲಾವಣೆಯ ಸಂಕೇತವಾದ ಇನ್‌ಫೋಸಿಸ್‌ಗೆ ಸೇರಿದ ಬಸ್‌ನ್ನು ಸುಟ್ಟು ಹಾಕಿದ್ದು ಆಶ್ಚರ್ಯವೇನಲ್ಲ. ಇದು ಇನ್‌ಫೋಸ್‌ನನ್ನು ಟೀಕಿಸಲು ಹೇಳಿದ ಮಾತಲ್ಲ. ಅದರ ಬಗ್ಗೆ ಜನರಿಗೆ ಗೌರವವೇ ಇದೆ. ಆದರೆ ಆಗುತ್ತಿರುವ ಬದಲಾವಣೆಯಲ್ಲಿ ಕನ್ನಡಿಗರು ತಮ್ಮದನ್ನು ಬಹಳಷ್ಟು ಕಳೆದು ಕೊಳ್ಳುತ್ತಿದ್ದಾರೆಂಬುದೂ ಅಷ್ಟೇ ನಗ್ನ ಸತ್ಯ. ಈ ಬಗ್ಗೆ ಸರ್ಕಾರ ಏನು ಮಾಡುತ್ತಿದೆ? ಸರ್ಕಾರವು ಮಾಹಿತಿ ತಂತ್ರಜ್ಞಾನಕ್ಕೆ ಅನೇಕ ರಿಯಾಯಿತಿಗಳನ್ನು ತೋರಿಸುತ್ತಿರುವ ಸಮಯದಲ್ಲೇ ಪದಾರ್ಥಗಳ ಬೆಲೆಗಳು ಗಗನಕ್ಕೆ ಹಾರುತ್ತಿವೆ. ಕೆಳ ಮಧ್ಯಮ ವರ್ಗದ ಜನರಿಗೆ ನೀರಿನ ಕಂದಾಯ ಹೆಚ್ಚಾಗಿದೆ, ಅದೇ ರೀತಿ ವಿದ್ಯುತ್ ದರ. ಭ್ರಷ್ಟಾಚಾರವಂತೂ ಅನೇಕಪಟ್ಟು ಬೆಳೆದಿದೆ.

ರಾಜಕುಮಾರರ ಅಪಹರಣದ ಘಟನೆಯಲ್ಲಿ ಪ್ರತಿಯೊಬ್ಬರೂ ತನ್ನ ಮೂಲಭೂತ ಹಕ್ಕಿಗೆ ಚ್ಯುತಿಬಂದಿರುವ ಹಾಗೆ ಅನುಭವಪಟ್ಟಿದ್ದಾರೆ. ಅದು ಒಬ್ಬ ವ್ಯಕ್ತಿಯ ಅಪಹರಣವಲ್ಲ, ಒಂದು ವಿಶಿಷ್ಟ ಪ್ರಪಂಚದ ಅಪಹರಣವೇ ಆಗಿದೆ. ಯಾವುದೋ ಒಂದು ಮಹತ್ತರವಾದದ್ದನ್ನು ಕಳೆದುಕೊಂಡಂತೆ ಪ್ರತಿಯೊಬ್ಬರಿಗೂ ಅನಿಸಿದೆ.

ಕಳೆದ ಒಂದು ದಶಕದಲ್ಲಿ ಆಗಿರುವ ಬದಲಾವಣೆಗಳು ಬೆಂಗಳೂರಿನ ಬಹುಸಂಖ್ಯಾತರನ್ನು – ಮಾಲ್ಗುಡಿಯಂಥ ಚಿಕ್ಕ ಊರಿನ ಜನರನ್ನು – ಹಿಂದಕ್ಕೆ ತಳ್ಳಿವೆ. ಇಡೀ ಬೆಂಗಳೂರು ನಗರ ಸ್ವಯಂ ಸ್ಫೂರ್ತಿಯಿಂದ ನಿಲುಗಡೆಗೆ ಬಂದಿದ್ದು, ಮರೆಯಬಾರದಂಥ ಎಚ್ಚರಿಕೆಯ ಸೂಚನೆಯನ್ನು ಕೊಟ್ಟಿದೆ. ಆಗ ಬಹಳ ಕಡಿಮೆ ಹಿಂಸಾಚಾರ ಆಯಿತೆಂಬ ಕಾರಣಕ್ಕಾಗಿ ಸಮಸ್ಯೆಯೇ ಇಲ್ಲ ಎಂಬ ಭ್ರಮೆ ನಮ್ಮದಾಗಬಾರದು. ಕನ್ನಡಿಗ ಮೂಲತಃ ಹಿಂಸಾ ಪ್ರವೃತ್ತಿಯವನಲ್ಲ, ಆದರೆ ಅವನ ಸುತ್ತ ಸಂಭವಿಸುತ್ತಿರುವ ಘಟನೆಗಳ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಅವನು ಹಿಂಸಕನಾಗಬಹುದು. ಈ ಬಗ್ಗೆ ಗಮನ ಇಲ್ಲದೇ ಹೋದಪಕ್ಷದಲ್ಲಿ ಬೆಂಗಳೂರು ನಗರ ಸ್ಫೋಟಗೊಳ್ಳಬಹುದಾದ ಅಗ್ನಿಕುಂಡದ ಮೇಲೆ ಕುಳಿತಂತಯೇ ಸರಿ.

(ಎಕಾನುಮಿಕ್ ಮತ್ತು ಪೊಲಿಟಿಕಲ್‌ವೀಕ್ಲಿ ಸಾಭಾರ.) ಅನು : ಸು.ಕೌ.

ವೈಚಾರಿಕ ಧಾರಾವಾಹಿ...........

ಕಮಲದಂತೆ ಬಾಳು ಸಮಗ್ರ ವಸ್ತು

– ದಾದಾ ಧರ್ಮಾಧಿಕಾರಿ

(ದಾದಾ ಧರ್ಮಾಧಿಕಾರಿ ಭಾರತದ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಜೀವನವನ್ನು ವಸ್ತುನಿಷ್ಠೆಯ ದೃಷ್ಟಿಯಿಂದ ನೋಡಿದರು. ಅವರ ಶತಮಾನೋತ್ಸವದ ಸಂದರ್ಭವನ್ನು ಉಪಯೋಗಿಸಿಕೊಂಡು ಓದುಗರಿಗೆ ಅವರ ವಿಚಾರಪೂರ್ಣ ಅನುಭವದ ಮಾತುಗಳನ್ನು ಇಲ್ಲಿ ಕ್ರಮಶಃ ಕೊಡಲಾಗುತ್ತಿದೆ. ಇದು ಐದನೇಯ ಸರಣಿ .–ಸಂ)

ಸತ್ಯನಿಷ್ಠೆಗೂ ವಸ್ತುನಿಷ್ಠೆಗೂ ಅನುಬಂಧವೇನು ಎಂಬುದರ ಎರಡು ಮಗ್ಗಲನ್ನೂ ನಿಮ್ಮ ಮುಂದಿಟ್ಟೆ. ಸಿದ್ಧಾಂತ – ವ್ಯವಹಾರ, ದರ್ಶನ – ವರ್ತನ, ತತ್ತ್ವಜ್ಞಾನ – ಆಚಾರ ಎರಡಕ್ಕೂ ಏನು ಸಂಬಂಧ? ಇವು ಜೀವನದ ಭಿನ್ನ ವಿಭಾಗಗಳೆ? ಭಿನ್ನ ಕ್ಷೇತ್ರಗಳೆ? ಸಿದ್ಧಾಂತ, ಆದರ್ಶ ಮತ್ತು ದರ್ಶನದ ಕ್ಷೇತ್ರದಲ್ಲಿ ವ್ಯವಹಾರದ ನಿಯಮ ಅನ್ವಯಿಸದೆ? ವ್ಯವಹಾರದ ಕ್ಷೇತ್ರದಲ್ಲಿ ಸಿದ್ಧಾಂತ ಅನ್ವಯಿಸದೆ? ಇಂಥದೊಂದು ವಿಭಾಜನ, ಆತ್ಯಂತಿಕ ಭೇದ ಜೀವನದ ಈ ಎರಡೂ ಕ್ಷೇತ್ರಗಳಲ್ಲಿ ಇದೆ ಎಂದು ಅನೇಕರು ತಿಳಿದಿದಾರೆ. ವ್ಯವಹಾರ ಸ್ವತಂತ್ರ ವಸ್ತುವೆ ಅಲ್ಲ. ಏಕೆಂದರೆ, ವ್ಯವಹಾರ ನಿತ್ಯಪರಿವರ್ತನಶೀಲ. ನಿತ್ಯ ಪರಿವರ್ತನಶೀಲವಾದುದನ್ನು ಅಳೆಯುವ ಮಾನದಂಡ, ಗಜಕಡ್ಡಿ ಪರಿವರ್ತನವಿಲ್ಲದುದು, ಬದಲು ಆಗದುದು. ಅಳತೆಗೋಲೇ ಬದಲಾಗುವಂಥದಾದರೆ ವ್ಯವಹಾರ ಅಪ್ರತಿಷ್ಠಿತವಾದೀತು. ನಾವು ಮಾಡಿದ್ದೇ ಸರಿ ಎಂದಾದೀತು. ಕೆಲಸ ಸರಿಯೋ ತಪ್ಪೋ ಎಂದು ಅಳೆಯುವ ಅಳತೆಗೋಲೇ ಇಲ್ಲದಾದೀತು. ಆದ್ದರಿಂದ ಇವೆರಡರಲ್ಲಿ ಆತ್ಯಂತಿಕ ಭೇದ ಇರಲಾರದು. ಅಸಂಭವ. ಇರಲೂ ಕೂಡದು. ಸತ್ಯನಿಷ್ಠ ಮನುಷ್ಯ ವಸ್ತುನಿಷ್ಠನೇ ಆಗುತ್ತಾನೆ. ವಸ್ತುರಹಿತನಾಗಲಾರ. ಸತ್ಯನಿಷ್ಠನ ವ್ಯವಹಾರದಿಂದ ಸಿದ್ಧಾಂತದ ವ್ಯಾವಹಾರಿಕತೆಯ ಪರೀಕ್ಷೆ ಆಗುತ್ತದೆ. ದರ್ಶನ, ತತ್ತ್ವಜ್ಞಾನಗಳು ಬಾಳಿಗೆ ಉಪಯೋಗವೆ? ಬಾಳಿನಲ್ಲಿ ಅವು ಚರಿತಾರ್ಥವಾದಾವೆ? ಬಾಳಿನಲ್ಲಿ ಸಿದ್ಧಾಂತವನ್ನು ಮೂಡಿಸಬಲ್ಲೆವೆ? ನಾವು ಸತ್ಯನಿಷ್ಠರಾದಾಗ ಇದನ್ನು ನಿರ್ಣಯಿಸಬಲ್ಲೆವು. ಸತ್ಯನಿಷ್ಠನೂ ತತ್ತ್ವನಿಷ್ಠನೂ ಆದ ಮನುಷ್ಯನ ಪ್ರಾಮಾಣಿಕ ವ್ಯವಹಾರವು ಅದಕ್ಕೆ ಅನುಸಾರವಾಗಿದ್ದೀತು. ನಮ್ಮ ಸಿದ್ಧಾಂತ, ನಮ್ಮ ದರ್ಶನ, ಎಷ್ಟರಮಟ್ಟಿಗೆ ವ್ಯಾವಹಾರಿಕ ಇದನ್ನು ನಿರ್ಣಯಿಸಬಹುದು.

ವೈಜ್ಞಾನಿಕ ಸಮಾಜವಾದ ನಮಗೆ ಒಂದು ಸೂತ್ರವನ್ನು ಕೊಟ್ಟಿದೆ. ಸಿದ್ಧಾಂತದ ಪರೀಕ್ಷೆ ಆಚರಣೆಯಲ್ಲಿ. ಶರಣರ ಬದುಕು ಮರಣದಲ್ಲಿ. ಸತ್ಯನಿಷ್ಠವೂ ತತ್ತ್ವನಿಷ್ಠವೂ ಆದ ಆಚರಣೆ ಸಿದ್ಧಾಂತದ ಒರೆಗಲ್ಲು.

ವಿಜ್ಞಾನದ ಕ್ಷೇತ್ರದಲ್ಲಿ ಆವಿಷ್ಕಾರ ಆಗುತ್ತವೆ. ಎರಡು ಬಗೆಯವು: ಒಂದು ಹೊಸ ಶೋಧ. ಇನ್ನೊಂದು ಅನಾವರಣ. ಪ್ಯಾಶ್ಚರ್ ದೇವೀ ಹಾಕುವ ಹೊಸ ರೂಢಿಯನ್ನು ತಂದ. ಇದು ಶೋಧ. ಯಾರು ಶೋಧ ಮಾಡುವವರು? ಯಾರ ಮಾತಿಗೆ ಬೆಲೆ ವಿಜ್ಞಾನದಲ್ಲಿ? ಯಾರ ಚಿತ್ತ ಶುದ್ಧವೋ, ಪ್ರಾಮಾಣಿಕವೋ, ಯಾರ ಉಪಕರಣ ಸತ್ಯವೋ ಅವರ ಮಾತಿಗೆ. ಅಪ್ರಾಮಾಣಿಕ ಚಿತ್ತ ವೈಜ್ಞಾನಿಕವಲ್ಲ. ಉದಾಹರಣೆಗೆ ಆನುವಂಶಿಕತೆಯ ಮಾತನ್ನು ತೆಗೆದುಕೊಳ್ಳೋಣ.

ಅನುವಂಶಿಕತೆ ವೈಜ್ಞಾನಿಕವೆ? ಇದರಲ್ಲಿ ಎರಡು ಅಂತರಾಯ. ವಿಜ್ಞಾನವು ವಸ್ತುನಿಷ್ಠ ಎಂದೆವಲ್ಲ. ವಸ್ತುನಿಷ್ಠೆಯಲ್ಲೇ ಎರಡು ಬಗೆಯ ಭೇದವೆ? ಅನುವಂಶಿಕತೆ ಜೀವನದ ತಥ್ಯವಲ್ಲ, ವೈಜ್ಞಾನಿಕ ಅಂತೂ ಅಲ್ಲ ಎನ್ನುತ್ತಾರೆ ರಷ್ಯಾದ ತತ್ತ್ವಜ್ಞಾನಿಗಳು. ಬುದ್ಧಿಭ್ರಮಣ, ಉನ್ಮಾದ ಅನುವಂಶಿಕವಲ್ಲ ಎನ್ನುತ್ತಾರೆ. ಹಾಗೆ ಆಸ್ಪತ್ರೆಗಳಲ್ಲಿ ಬರೆದಿರುತ್ತದೆ. ಉಳಿದ ದೇಶಗಳ ವಿಜ್ಞಾನಿಗಳೆಲ್ಲ ಅನುವಂಶಿಕತೆ ವೈಜ್ಞಾನಿಕ ಎನ್ನುತ್ತಾರೆ. ಇದು ಮೂರ್ಖರವಾದ, ಬಂಡವಾಳಗಾರರ ವಿಜ್ಞಾನ ಎನ್ನುತ್ತಾರೆ ರಷ್ಯಾದವರು. ಹೀಗೆ ವಿಜ್ಞಾನದಲ್ಲಿ ಎರಡು ಭಾಗವಾಯಿತು. ಬಂಡವಾಳಗಾರಿಕೆಯ ವಿಜ್ಞಾನ, ಕ್ರಾಂತಿಕಾರರ ವಿಜ್ಞಾನ. ವಿಜ್ಞಾನದಲ್ಲೇ ಎರಡು ಪಙ್ತ್ತಿಯಾದರೆ, ಎರಡು ಪಕ್ಷಗಳಾದರೆ ಅದರ ವೈಜ್ಞಾನಿಕತೆ ಹೋಯಿತು. ಹಾಗಾದರೆ ವಿಜ್ಞಾನದಲ್ಲಿ ಇರಬೇಕಾದ ಗುಣ ಏನು? ನಿರಪೇಕ್ಷತೆ, ಪ್ರಾಮಾಣಿಕತೆ. ನಿರಪೇಕ್ಷ ಎಂದರೆ ಅದರಲ್ಲಿ ವಿಜ್ಞಾನಿಯ ಮನೋವಿಕಾರ ಬೆರೆಯಬಾರದು. ವಿಜ್ಞಾನಿ ಸಾಧುಪುರುಷನಾಗಬೇಕು, ಅವನ ಚಿತ್ತ ನಿರ್ವಿಕಾರವಾಗಿರಬೇಕು. ಹೀಗೆಂದರೆ ಬೇರೆ ವ್ಯವಹಾರದಲ್ಲಿ, ತನ್ನ ಹೆಂಡತಿಯೊಡನೆ, ತಾಯಿಯೊಡನೆ ಮಾಡುವ ವ್ಯವಹಾರದಲ್ಲಿ ವಿಕಾರ ಇರಕೂಡದು ಎಂದಲ್ಲ. ಪ್ರಯೋಗಶಾಲೆಯಲ್ಲಿ ಕೂತಾಗ ಆತ್ಮನಿಷ್ಠ ಆಗುವುದಿಲ್ಲ, ವಸ್ತುನಿಷ್ಠ ಆಗುತ್ತಾನೆ. ಅವನ ಮನಸ್ಸಿನ ವಿಚಾರ, ವಿಕಾರ ಅವನ ವೈಜ್ಞಾನಿಕ ಶೋಧದಲ್ಲಿ ಬೆರೆಯಬಾರದು. ಎಂದರೆ, ವೈಜ್ಞಾನಿಕನಲ್ಲಿ ಎಷ್ಟು ನಿರಪೇಕ್ಷತೆ, ಪ್ರಾಮಾಣಿಕತೆಗಳು ಇರಬೇಕೋ ಸತ್ಯನಿಷ್ಠ ಮನುಷ್ಯನಲ್ಲೂ ಅಷ್ಟೇ ಇರಬೇಕು. ಪಕ್ಷಪಾತಿಯಾಗಬಾರದು ಎಂಬುದು ವಿಜ್ಞಾನಿಯ ಮರ್ಯಾದೆ. ಸತ್ಯನಿಷ್ಠ ಮನುಷ್ಯನಿಗೂ ಅದೇ ಮರ್ಯಾದೆ.

ಎರಡರಲ್ಲೂ ಸಮಾನತೆ ಬಂತು. ಸತ್ಯನಿಷ್ಠೆ ಮತ್ತು ವಸ್ತುನಿಷ್ಠೆಗಳಲ್ಲಿ ಸಮಾನತೆ ಬಂದುದರಿಂದ ಎರಡಕ್ಕೂ ಅನುಬಂಧ ಬಂತು. ಈ ಯುಗದಲ್ಲಿ ವೇದಾಂತ – ವಿಜ್ಞಾನ, ಆಧ್ಯಾತ್ಮಿಕ – ವೈಜ್ಞಾನಿಕ ಇವುಗಳ ಆಚರಣೆ ಒಂದಾಗ

ಬೇಕು ಎನ್ನುತ್ತಾರೆ. ಎರಡೂ ಅಸಂಗತವಾಗಬಾರದು, ಸುಸಂಗತವಾಗಬೇಕು. ಮನುಷ್ಯನ ವೈಜ್ಞಾನಿಕತೆ ಬೆಳೆದು ಮಾನವತೆ ಕಡಮೆಯಾದರೆ? ದೀಪಗಳ ಸಂಖ್ಯೆ ಹೆಚ್ಚಾದರೆ ಕತ್ತಲೆಯೂ ಹೆಚ್ಚಾದೀತೆ? ಸಾಧ್ಯವಿಲ್ಲ. ದೀಪ ಹೆಚ್ಚಾದರೆ ಬೆಳಕು ಹೆಚ್ಚಾಗಬೇಕು. ವಿಜ್ಞಾನವು ಸಾಂಸ್ಕೃತಿಕ ಹಾಗೂ ಪ್ರಕೃತಿಯ ದ್ಯೋತಕವಾದರೆ ವೈಜ್ಞಾನಿಕತೆ ಮತ್ತು ಮಾನವತೆ ಎರಡೂ ಒಟ್ಟಿಗೆ ಬೆಳೆಯಬೇಕು. ಹೀಗೆ ಆಗಿಲ್ಲ ಎಂದೇ ಇಷ್ಟೆಲ್ಲ ಸಮಸ್ಯೆಗಳು.

ವಸ್ತುನಿಷ್ಠೆಯ ಜೊತೆಯಲ್ಲಿ ಸತ್ಯನಿಷ್ಠೆ ಏಕೆ ಬೆಳೆದಿಲ್ಲ? ಆಗಲೇ ಹೇಳಿದೆ, ವಸ್ತುನಿಷ್ಠೆ ಜಡವಾದ ಅಲ್ಲ. ಅದೇ ಬೇರೆ, ವಸ್ತುನಿಷ್ಠೆಯೇ ಬೇರೆ. ಅಧ್ಯಾತ್ಮ ಕಲ್ಪನಾ ವಿಲಾಸವೂ ಅಲ್ಲ, ಸಿದ್ಧಾಂತವೂ ಅಲ್ಲ. ಅದು ಜೀವನದ ತತ್ತ್ವ. ಅದೇ ರೀತಿ ಸೃಷ್ಟಿಯಲ್ಲಿರುವ ಶಕ್ತಿಗೆ ವಸ್ತು ಎಂದು ಹೆಸರು. ಸೃಷ್ಟಿಯಲ್ಲಿರುವ ವಸ್ತುಗತ ಶಕ್ತಿಯನ್ನೇ ವಸ್ತು ಎನ್ನುತ್ತಾರೆ. ಇದನ್ನು ಅರಿತುಕೊಳ್ಳುವುದು, ವಾಸ್ತವಿಕವಾಗಿ ಗುರುತಿಸುವುದು ವಿಜ್ಞಾನ. ಮನುಷ್ಯನಲ್ಲಿ ಅಡಗಿರುವ ವೈಯಕ್ತಿಕ ಹಾಗೂ ಸಾಮಾಜಿಕ ತಥ್ಯವನ್ನು ತಿಳಿದುಕೊಳ್ಳುವುದು ಅಧ್ಯಾತ್ಮ. ಇವೆರಡರಲ್ಲೂ ಈ ರೀತಿಯ ಅನುಬಂಧ ಇದೆ. ಆದ್ದರಿಂದ ಈ ಎರಡನ್ನೂ ಕಾಣಲು ನಮ್ಮ ಶಕ್ತಿ, ನಮ್ಮ ದೃಷ್ಟಿ ಸಮನ್ವಯಾತ್ಮಕವಾಗಬೇಕು.

ನಿಮ್ಮ ಧರ್ಮದ ಕ್ಷೇತ್ರದಲ್ಲಿ ಸತ್ಯ ಇದೆ. ಅಲ್ಲಿ ಉಪದೇಶ, ವಿಚಾರ ವಿನಿಮಯ ಅಗತ್ಯ. ಜನರಿಗೆ ತಿಳಿಸಿ ಹೇಳುವುದು, ಬೌದ್ಧಿಕ ಸಮಾಧಾನ ನೀಡುವುದು ಆಧ್ಯಾತ್ಮಿಕ ಕ್ಷೇತ್ರಕ್ಕೆ ಸರಿ. ವಿನಯಪೂರ್ವಕ ತರ್ಕಮಾಡಬೇಕು. ಮಧುರ ವಿಚಾರವಿನಿಮಯ ಮಾಡಬೇಕು. ಇವೆಲ್ಲವೂ ಧರ್ಮದ ಕ್ಷೇತ್ರಕ್ಕೆ, ಆಧ್ಯಾತ್ಮಿಕ ಕ್ಷೇತ್ರಕ್ಕೆ ಸರಿ. ರಾಜಕೀಯ ಕ್ಷೇತ್ರದಲ್ಲಿ ಇದು ಉಪಯೋಗವಿಲ್ಲ ಎನ್ನುತ್ತಾನೆ ಈಗಿನ ಮನುಷ್ಯ.

ಹೀಗೆ ಧಾರ್ಮಿಕ ಕ್ಷೇತ್ರ, ಆರ್ಥಿಕ ಕ್ಷೇತ್ರ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ವ್ಯಾವಹಾರಿಕತೆಯೇ ಬೇರೆ, ಧರ್ಮವೇ ಬೇರೆ ಆಯಿತು. ಇದರಿಂದ ಮನುಷ್ಯನ ವ್ಯಕ್ತಿತ್ವದಲ್ಲಿ ಭೇದ ಹುಟ್ಟಿತು. ಮನುಷ್ಯನ ವ್ಯಕ್ತಿತ್ವ ವಿಚ್ಛಿನ್ನವಾಯಿತು. ನಮಗೆ ಬೇಕಾದುದು ಸಂಪೂರ್ಣ ಮತ್ತು ಸಮಗ್ರ ವ್ಯಕ್ತಿತ್ವ. ಎರಡು ತುಂಡು, ಎರಡು ಹೋಳು ಆಗಬಾರದು. ಮನುಷ್ಯನ ವ್ಯಕ್ತಿತ್ವದಲ್ಲಿ ಬೇರೆಬೇರೆ ಮಟ್ಟಗಳಿವೆಯೆ? ಬೇರೆ ಬೇರೆ ಕೊಠಡಿ, ಖಾನೆ, ಗೂಡು ಇಲ್ಲ. ಪಂಚೆಯನ್ನು ಮಡಿಸಿದರೆ ನಾಲ್ಕು ಮಡಿಕೆ ಆದೀತು. ಮನುಷ್ಯನ ಬಾಳಿನಲ್ಲಿ ಹೀಗೆ ಮಡಿಕೆಗಳಿವೆಯೆ? ಇದು ಧಾರ್ಮಿಕ ಮಡಿಕೆ, ಇದು ರಾಜಕೀಯ, ಇದು ಆರ್ಥಿಕ, ಇದು ಸಾಮಾಜಿಕ – ಹೀಗೆ ಇಷ್ಟು ಮಡಿಕೆ ಇವೆಯೆ? ಇವು ಮಡಿಕೆ ಅಲ್ಲ.

ಕಮಲದ ಹೂವಿನಂತೆ ಬಾಳು ಸಮಗ್ರ ವಸ್ತು. ಸಾವಿರ ಎಸಳಿದ್ದರೂ ಹೂ ಒಂದೇ, ಅದರಲ್ಲಿ ಬೇರೆ ಬೇರೆ ಅಂತಸ್ತುಗಳಿಲ್ಲ. ಖಾನೆಗಳಿಲ್ಲ.

ಈ ಸಮಗ್ರತೆ ಮನುಷ್ಯನ ವ್ಯವಹಾರದಲ್ಲಿ ಪ್ರಕಟವಾಗಬೇಕು. ಈ ವ್ಯವಹಾರವು ಏಕಾಂತದಲ್ಲಿ ಆದೀತೆ? ಮನುಷ್ಯನ ವ್ಯವಹಾರ ಏಕಾಂತದಲ್ಲಿ ಇಲ್ಲ. ಏಕಾಂತದಲ್ಲಿ ಆದರೆ ಅದಕ್ಕೆ ಬೆಲೆ ಇಲ್ಲ. ಏಕಾಂತದಲ್ಲಿ ಮನುಷ್ಯ ಬರೀ ಜೀವವಾಗಿ ಬದುಕಬಹುದು. ಮನುಷ್ಯನಾಗಿ ಅಲ್ಲ. ಏಕಾಂತದಲ್ಲಿ ಮನುಷ್ಯತ್ವ ಸಿದ್ಧಿ ಆಗದು. ಬೇಕನ್ ಒಂದು ಲೇಖನ ಬರೆದಿದ್ದಾನೆ. ಏಕಾಂತ ಪ್ರಿಯನು, ದೇವರು ಅಥವಾ ಪಶು. ಮನುಷ್ಯ ಏಕಾಂತಪ್ರಿಯನಲ್ಲ. ಏಕಾಂತದಲ್ಲಿ ಮನುಷ್ಯತ್ವ ಅಗತ್ಯ ಎಲ್ಲ. ಇನ್ನೊಬ್ಬರು ಇದ್ದರೆ ಅಲ್ಲವೆ ವ್ಯವಹಾರ, ಮನುಷ್ಯತ್ವ? ಇಲ್ಲದಿದ್ದರೆ ಇಲ್ಲ.

ಮನುಷ್ಯನ ಮನುಷ್ಯತ್ವ ಮತ್ತು ಸಾಮಾಜಿಕತೆ ಬೇರೆಬೇರೆ ಅಲ್ಲ. ವಿಶ್ಲೇಷಣಕ್ಕಾಗಿ, ವಿವೇಚನೆಗಾಗಿ ಬೇರೆಬೇರೆ ಎಂದು ತಿಳಿದರೆ ಆ ಮಾತು ಬೇರೆ. ಇವು ಬೇರೆಬೇರೆ ಬದಿ. ಎರಡು ವಿಭಾಗಗಳಲ್ಲ. ಮನುಷ್ಯನ ವ್ಯಕ್ತಿತ್ವ ಇದು ಮತ್ತು ಅವನ ಸಾಮಾಜಿಕತೆ ಅದು ಎಂದು ಎರಡರಲ್ಲಿಯೂ ಸಂಘರ್ಷಣೆಯ ಕಲ್ಪನೆ ಮಾಡಿಕೊಳ್ಳುತ್ತಾರೆ. ನಾನು ಸಮಾಜದ ಸದಸ್ಯನೆ, ಅಥವಾ ವ್ಯಕ್ತಿಯೆ? ಮನುಷ್ಯ ಕಟ್ಟಿದ ಸಂಸ್ಥೆಗಳ ಸದಸ್ಯತ್ವವಲ್ಲ. ಸ್ವಾಭಾವಿಕವಾದ ಸಮಾಜದ ಸದಸ್ಯತ್ವ ಬೇರೆ, ಮನುಷ್ಯತ್ವವೇ ಬೇರೆ ಅಲ್ಲ. ಒಂದೇ. ನಿಮ್ಮ ಮನಸ್ಸಿನಲ್ಲಿ ವ್ಯಕ್ತಿವಾದ, ಸಮಾಜವಾದ ಎಂಬ ವಿರೋಧಭಾವ ಬೇಡ. ವಾದ ಇದ್ದಲ್ಲಿ ವಿರೋಧ ಇದ್ದೇ ಇದೆ. ವ್ಯಕ್ತಿವಾದ, ಸಮಾಜವಾದ ಬೇರೆ ಬೇರೆ. ಆದರೆ ಮನುಷ್ಯನ ವ್ಯಕ್ತಿತ್ವ, ಸಾಮಾಜಿಕತೆಗಳು ಅವಿರೋಧಿ ವಸ್ತುಗಳು. ಅಷ್ಟೇ ಅಲ್ಲ, ಪರಸ್ಪರ ಪೋಷಕ. ಸಾಮಾಜಿಕತೆಯಿಂದ ವ್ಯಕ್ತಿತ್ವದ ವಿಕಾಸ, ವ್ಯಕ್ತಿ ವಿಕಾಸದಿಂದ ಸಾಮಾಜಿಕತೆಯ ಪ್ರಗತಿ. ಹೀಗೆ ಇವೆರಡರಲ್ಲಿ ಅನ್ಯೋನ್ಯತೆ ಇದೆ. ಒಂದನ್ನು ಒಂದು ನಂಬಿ ಉನ್ನತಿ ಪಡೆಯುತ್ತವೆ. ನನ್ನ ಕರ್ತವ್ಯ ಹೆಚ್ಚೋ ನನ್ನ ಅಧಿಕಾರ ಹೆಚ್ಚೋ ಎಂಬ ವಿರೋಧ ನಿಮ್ಮ ಮನಸ್ಸಿಗೆ ಬಾರದು. ಸಾಮಾಜಿಕ ನಿಯಂತ್ರಣಕ್ಕೆ ಮಹತ್ವ ಹೆಚ್ಚೋ, ವ್ಯಕ್ತಿಸ್ವಾತಂತ್ರ್ಯಕ್ಕೆ ಹೆಚ್ಚೋ ಇದು ಕೃತ್ರಿಮ ವಿರೋಧ, ವಾಸ್ತವಿಕವಲ್ಲ. ಸಾಮಾಜಿಕತೆಯೇ ವ್ಯಕ್ತಿವಿಕಾಸ, ವ್ಯಕ್ತಿವಿಕಾಸವೇ ಸಾಮಾಜಿಕತೆ. (ಮುಂದುವರಿಯುವುದು)

ಶಿಕ್ಷಣ ವಿಚಾರಧಾರೆ........ ೯ನೇ ಪುಟದಿಂದ

ಪ್ರಯೋಜಕರಾಗುವಷ್ಟು. ವಿಜ್ಞಾನ ಮತ್ತು ಉದ್ಯೋಗದ ಸಾಧಾರಣ ತಳಹದಿ ಹಾಗೂ ಯಾವುದಾದರೊಂದು ವೃತ್ತಿಯಲ್ಲಿ ಸಂಪೂರ್ಣ ಕೌಶಲ ಇದ್ದು ಅವರಿಗೆ ಲಭಿಸಿರಬೇಕು. ಕೈಗೆಲಸದ ಮೂಲಕ ಸಂಪತ್ತನ್ನು ಸೃಷ್ಟಿ ಮಾಡುವ ಭವ್ಯ ಪ್ರಪಂಚದಲ್ಲಿ ಹುಡುಗನೂ, ಹುಡುಗಿಯೂ ತನ್ನ ತನ್ನ ಸ್ಥಾನವನ್ನು ನಿರ್ಮಿಸಿಕೊಳ್ಳುವಂತಿರಬೇಕು.

ವಿಚಾರ ದೀಪ್ತಿ......................

ಗಾಂಧೀಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಕಟ್ಟಿಹೋಗುವ ಇಷ್ಟ ನನಗಿಲ್ಲ. ನಾನು ಯಾವುದಾದರೂ ನೂತನ ತತ್ವದ ಅಥವಾ ಸಿದ್ಧಾಂತದ ಮೂಲಪುರುಷ ಎಂಬ ಭಾವನೆ ನನಗಿಲ್ಲ. ನಿತ್ಯ ಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸಾಧಾರಣನಂತೆ ಪ್ರಯತ್ನಿಸಿದ್ದೇನೆ; ಅಷ್ಟೆ.

ನಿಲ್ಲುವುದು ನನ್ನ ಕೃತಿಯೇ ಹೊರತು ನನ್ನ ಮಾತೂ ಅಲ್ಲ, ಬರಹವೂ ಅಲ್ಲ.

ಗಾಂಧೀಪಂಥ ಎಂಬುದು ದೋಷದ ಪ್ರತೀಕವಾಗಿರುವುದಾದರೆ ಅದು ನಾಶ ಹೊಂದಲಿ. ಗಾಂಧೀಪಂಥ ಎಂಬುದು ಪಂಥಾಭಿಮಾನಕ್ಕೆ ಮತ್ತೊಂದು ಹೆಸರಾದರೆ ಅದು ವಿನಾಶ ಯೋಗ್ಯವೇ ನಿಜ. ತಾನು ಗಾಂಧಿಯ ಅನುಯಾಯಿ ಎಂದು ಯಾರೊಬ್ಬರೂ ಹೇಳದಿರಲಿ.

ನನ್ನನ್ನು ಮೆಚ್ಚುವವರಿಗೂ ನನ್ನ ಮಿತ್ರರಿಗೂ ಒಂದು ಧೈರ್ಯ ಹೇಳಬಲ್ಲೆ. ಮಹಾತ್ಮ ಎಂದು ಮರೆತು ನನ್ನನ್ನು ಬರಿಯ 'ಗಾಂಧೀ' ಎಂದು ಭಾವಿಸುವುದಾದರೆ ಅವರು ನನ್ನ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ನಾನು ಯಾವ ತತ್ವಗಳನ್ನು ಜೀವನದಲ್ಲಿ ಅನುಷ್ಠಾನ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇನೆಯೊ ಅದನ್ನು ತಾವು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು; ಇಲ್ಲವೆ ಅದರಲ್ಲಿ ಅವರಿಗೆ ನಂಬುಗೆ ಇರದಿದ್ದ ಪಕ್ಷದಲ್ಲಿ ಅದನ್ನು ಸರ್ವ ರೀತಿಯಿಂದಲೂ ವಿರೋಧಿಸಬೇಕು – ಇದೇ ನನ್ನ ಮಿತ್ರರು ನನಗೆ ತೋರಿಸಬಹುದಾದ ಪರಮ ಗೌರವ.

ಯಾವ ತತ್ವಗಳಿಗಾಗಿ ನಾನು ನಿಂತಿದ್ದೇನೆಯೊ ಅವುಗಳಿಗೆ ತಕ್ಕಂತೆ ನಾನು ಬಾಳುತ್ತಿಲ್ಲ. ನೀವು ಅನುಯಾಯಿಗಳಲ್ಲ. ಸಹ ವಿದ್ಯಾರ್ಥಿಗಳು, ಸಹಯಾತ್ರಿಕರು, ಅನ್ವೇಶಕರು, ಸಹಉದ್ಯೋಗಿಗಳು,

– ಗಾಂಧೀ

ಮಹಾದೇವ್ ದೇಸಾಯಿ

– ವಿನೋಬಾ

(ಮಹಾತ್ಮ ಗಾಂಧೀಜಿಯವರ ನಿಕಟವರ್ತಿಗಳಲ್ಲಿ ಮಹಾದೇವ್ ದೇಸಾಯಿ, ಒಬ್ಬರು. ಅವರು ಗಾಂಧೀಯವರಿಗೆ ೧೯೧೭ ರಿಂದ ೧೯೪೨ ವರೆಗೆ ೨೫ ವರ್ಷಗಳಷ್ಟು ದೀರ್ಘಕಾಲ ಆಪ್ತಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ೧೯೪೨ ನೇ ಇಸ್ವಿಯಲ್ಲಿ ಮಹಾತ್ಮರೊಂದಿಗೆ ಪುಣೆ ಬಳಿಯ ಆಗಾಖಾನ್ ಅರಮನೆಯಲ್ಲಿ ಬಂಧಿತರಾಗಿದ್ದಾಗ ಮಹಾತ್ಮರ ತೊಡೆಯ ಮೇಲೆಯೇ ಅಸುನೀಗಿದ ಅತ್ಯಂತ ಅರ್ಪಿತ ವ್ಯಕ್ತಿ. ಮಹಾದೇವ್ ದೇಸಾಯಿ ಅವರ ಬಗೆಗೆ ಇನ್ನೋರ್ವ ಗಾಂಧೀ ನಿಕಟವರ್ತಿ ವಿನೋಬಾರಿಂದ ಕೆಲವು ವಿಚಾರಗಳು ಇಲ್ಲಿವೆ – ಸಂ)

ಮಹಾದೇವಭಾಯಿ ೧೯೪೨ ರಲ್ಲಿ ತೀರಿಕೊಂಡರು. ಆಗ ನನ್ನ ವಯಸ್ಸು ೪೭ ಮತ್ತು ಮಹಾದೇವರ ವಯಸ್ಸು ೫೦. ಅವರು ನನಗಿಂತ ಮೂರು ವರುಷ ದೊಡ್ಡವರು, ಅಷ್ಟೆ.

೧೯೪೨ ರಲ್ಲಿ ಬಾಪೂ ಉಪವಾಸಗಳ ಒಂದು ಶೃಂಖಲೆಯನ್ನೇ ಪ್ರಾರಂಭ ಸಲು ಯೋಚಿಸಿದ್ದರು. "ನಾನು ಜೇಲಿಗೆ ಹೋದ ಕೂಡಲೆ ಸಂಜ್ಞೆ ಮಾಡು ವೆನು. ನಾನು ಉಪವಾಸ ಪ್ರಾರಂಭಿಸಿದ ಕೂಡಲೆ ಎಲ್ಲರೂ ಉಪವಾಸ ಪ್ರಾರಂಭಿಸಬೇಕು" ಎಂಬುದಾಗಿ ಅವರು ಹೇಳಿದರು. ಜನರು ಗಾಬರಿಯಾದರು. ಉಪವಾಸವನ್ನು ಅದಕ್ಕೆ ಯೋಗ್ಯರಾಗಿರುವವರು ಮಾತ್ರ ಮಾಡಬೇಕೆಂಬುದಾಗಿ ಹೇಳ ಹತ್ತಿದ್ದರು ಮತ್ತು ಯಾವ ಕಾರಣಕ್ಕೂ ಬಾಪೂ ಉಪವಾಸ ಮಾಡಕೂಡ ದೆಂದೂ ಹೇಳಿದರು. ಆಗ ಬಾಪೂ ನನ್ನನ್ನು ತಮ್ಮ ಬಳಿಗೆ ಕರೆದು ತಮ್ಮ ಅಂತಿಮ ಉಪವಾಸದ ಬಗ್ಗೆ ತಿಳಿಸಿ ನನಗೆ ಕೇಳಿದರು, "ಉಪವಾಸ ಮಾಡಬಹುದಲ್ಲವೆ? ಈ ಬಗ್ಗೆ ನೀನೇನು ಸಲಹೆ ಕೊಡುತ್ತೀಯಾ?" ಈಗಾಗಲೇ ತಮ್ಮ ಅಭಿಪ್ರಾಯ ರೂಪಿಸಿಕೊಂಡು ಬಿಟ್ಟಾದ ಮೇಲೆ ಬಾಪೂ ನನ್ನನ್ನು ಕೇಳಿದ್ದರು. ಅದಕ್ಕಾಗಿ ನಾನು ಹೇಳಿದೆ, "ಯಾವ ಕೆಲಸವನ್ನು ಶ್ರೀರಾಮನು ಜ್ಞಾನಪೂರ್ವಕವಾಗಿ ಮಾಡಬಲ್ಲನೋ ಅದನ್ನು ಹನುಮಂತನೂ ಶ್ರದ್ಧಾಪೂರ್ವಕವಾಗಿ ಮಾಡಬಲ್ಲ. ಆದ್ದರಿಂದ ತಾವು ಉಪವಾಸ ಪ್ರಾರಂಭಿಸಿದಲ್ಲಿ ನಮ್ಮಂಥವರೂ ಸಹ ತಮ್ಮ ಉಪವಾಸ ಪ್ರಾರಂಭಿಸುವರು." ಈ ಎಲ್ಲ ಚರ್ಚೆಯನ್ನು ಮಹಾದೇವಭಾಯಿ ಕೇಳಿಸಿಕೊಂಡರು. "ಈಗ ಈ ಇಬ್ಬರೂ ಒಂದೇ ಅಭಿಪ್ರಾಯದವರಾಗಿದ್ದಾರೆ. ಆದ್ದರಿಂದ ಇನ್ನು ಮೇಲೆ ಬಾಪೂಗೆ ವಿರೋಧವಾಗಿ ಯಾರೂ ತಮ್ಮ ಅಭಿಪ್ರಾಯ ತಿಳಿಸಲು ಸಾಧ್ಯವಿಲ್ಲ. ವಿನೋಬಾ ಒಬ್ಬರೇ ಬಾಪೂರ ವಿಚಾರವನ್ನು ಬದಲಾಯಿಸಬಲ್ಲವರಾಗಿದ್ದರು. ಆದರೆ ಅವರೂ ಬಾಪೂರ ಜೊತೆಗೆ ಒಂದಾಗಿದ್ದಾರೆ. ಆದ್ದರಿಂದ ಇನ್ನು ಉಪವಾಸ ನಡೆಯುವುದು ಖಚಿತ

ಮತ್ತು ಬಹುಶಃ ಸಾವೂ ಆಗಬಹುದು" ಎಂದು ಮಹಾದೇವರಿಗೆ ಅನಿಸಿತು. ಅದರ ಪರಿಣಾಮವಾಗಿ ಅವರಿಗೆ ಆಘಾತವಾಯಿತು. ಈ ವೇದನೆಯ ಕಾರಣದಿಂದಲೇ ಮಹಾದೇವಭಾಯಿ ತೀರಿಕೊಂಡರೆಂದು ನನಗೆ ಅನಿಸುತ್ತದೆ, ಅವರು ತೀರಿಕೊಂಡಾಗ ಬಾಪೂರ ಕಣ್ಣುಗಳಲ್ಲಿ ನೀರು ಬಂತು ಮತ್ತು ಅವರು ಹೇಳಿದರು," ಮಹಾದೇವ ನಾದ ನಂತರ ನಾ ಹೋಗಬೇಕಿತ್ತು, ಆದರೆ ಅವರು ನನಗಿಂತ ಮೊದಲೇ ಹೋದರು." ಕಿಶೋರಲಾಲ್‌ಭಾಯಿ ಅಂದರು, "ಪ್ರಾಯಪ್ರಾಯದವರು ಕ್ಯೂ ಮುರಿದು ಮುಂದಕ್ಕೆ ಹೋಗುತ್ತಾರೆ. ವೃದ್ಧರು ಹಿಂದುಳಿಯುತ್ತಾರೆ. ಮಹಾದೇವಭಾಯಿ ಕೂಡ ಕ್ಯೂ ಮುರಿದು ಹೋದರು." ಯಾರು ಮೊದಲು ಹೋಗಬಾರದೊ ಅವರು ಮೊದಲು ಹೋದಾಗ ಯಾರಿಗೂ ಸರಿ ಅನಿಸುವುದಿಲ್ಲ, ಆದರೆ ದೇವರ ಇಚ್ಛೆಯಂತೆಯೇ ಎಲ್ಲವೂ ನಡೆಯುವುದು,

ಒಂದು ಸಾಲ ನಾನು ಸಾಬರಮತಿಯ ದಡೆಯ ಮೇಲೆ ಕುಳಿತು ಕೆಲವು ಭಜನೆಗಳನ್ನು ಹೇಳುತ್ತಿದ್ದೆ. ಅಷ್ಟರಲ್ಲಿ ಎಲ್ಲಿಂದಲೋ ಅಳುವ ಸದ್ದು ಕೇಳಿತು. ಯಾರು ಅಳುತ್ತಿದ್ದಾರೆಂದು ನೋಡಿದರೆ ಮಹಾದೇವಭಾಯಿ ನನ್ನ ಭಜನೆ ಕೇಳಿ ಅಳುತ್ತಿದ್ದರು! ಇಷ್ಟೊಂದು ಭಕ್ತಿ, ಮುಗ್ಧತೆ ಅವರಲ್ಲಿ ಇತ್ತು. ಆದ್ದರಿಂದಲೇ ನಾನೆಂದಿಗೂ ಮಹಾದೇವಭಾಯಿಯವರನ್ನು ಮರೆಯಲಾರೆ.

ಮಹಾದೇವಭಾಯಿ ಬಾಪೂರ ದಿನಚರಿಯನ್ನು ಪ್ರಕಟಗೊಳಿಸಿದ್ದಾರೆ. ೨೫ - ೩೦ ಸಂಪುಟಗಳು ಪ್ರಕಟವಾಗಿವೆ. ಒಂದೊಂದು ೪೦೦-೫೦೦ ಪುಟಗಳಿರಬಹುದು. ಇನ್ನೂ ಎಷ್ಟೋ ಸಂಪುಟಗಳು ಪ್ರಕಟವಾಗುವುದರಲ್ಲಿವೆ. ಇಷ್ಟೊಂದೆಲ್ಲವನ್ನೂ ಅವರು ಬರೆದಿಟ್ಟರು. ಗುಜರಾತಿ, ಮರಾಠಿ, ಹಿಂದೀ, ಸಂಸ್ಕೃತ, ಬಂಗಾಳಿ ಮತ್ತು ಇಂಗ್ಲೀಷ್ - ಇಷ್ಟು ಭಾಷೆಗಳನ್ನು ಅವರು ತಿಳಿದಿದ್ದರು. ಬಾಪೂರ ಲೇಖನಗಳನ್ನು ತಿದ್ದಿ ಪ್ರಕಟಣೆಗೆ ಕಳುಹಿಸುತ್ತಿದ್ದರು. ಇಷ್ಟೊಂದು ಉತ್ತಮವಾದ ಕೆಲಸ ಮಾಡುತ್ತಿದ್ದರು. ಅವರಲ್ಲಿ ಬಹಳಷ್ಟು ಜ್ಞಾನವಿತ್ತು. ಆದರೂ ಅವರು ಮುಗ್ಧರಾಗಿಯೇ ಇದ್ದರು. ತುಕಾರಾಮ್ ಮಹಾರಾಜರ ಪ್ರಕಾರ ಮುಗ್ಧತೆ ಒಂದು ಅಲಂಕಾರ. ಅದರ ಎದುರಿನಲ್ಲಿ ದ್ವೈತಭಾವ ನಿಲ್ಲಲಾರದು. ಯಾರು ವಿಷ್ಣುದಾಸರೋ, ವೈಷ್ಣವರೋ ಅವರಿಗೆ ಇದು ಶೋಭೆಯಾಗಿದೆ. ಅಂಥವರನ್ನು ಯಾರೂ ವಿರೋಧಿಸಲು ಸಾಧ್ಯವಿಲ್ಲ. ಇಂಥ ಮುಗ್ಧತೆ ಮಹಾದೇವಭಾಯಿಯವರಲ್ಲಿ ಇತ್ತು. ವೇದದಲ್ಲಿ ಶ್ರದ್ಧಾಸೂಕ್ತ ಇದೆ. ಅದು ಮಹಾದೇವಭಾಯಿಯವರಿಗೆ ಕಂಠಪಾಠವಾಗಿತ್ತು. ಆ ಸೂತ್ರವನ್ನು ಅವರು ಯಾವಾಗಲೂ ಹೇಳುತ್ತಿದ್ದರು. ೩೨ನೇ ಪುಟ ನೋಡಿ

ಅಪರಾಧಿ ರಾಜಕಾರಣದ ವಿರುದ್ಧ ನಾಗರಿಕ ಸಮಾಜ ದನಿ ಎತ್ತಲಿ.

– ಕೆ. ಆರ್. ನಾರಾಯಣನ್

(ಸ್ವಾತಂತ್ರ್ಯ ದಿನದ ಮುನ್ನಾ ದಿನವಾದ ಕಳೆದ ಆಗಸ್ಟ್ ೧೪ ರಂದು ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ರಾಷ್ಟ್ರಪತಿ ಶ್ರೀ ಕೆ. ಆರ್. ನಾರಾಯಣನ್ ಅವರ ಭಾಷಣದ ಕೆಲ ಭಾಗ ಇಲ್ಲಿವೆ. – ಸಂ)

ನಮ್ಮ ಸ್ವಾತಂತ್ರ್ಯದ ೫೩ ನೇ ವಾರ್ಷಿಕೋತ್ಸವ ಮತ್ತು ಇಪ್ಪತ್ತೊಂದನೇ ಶತಮಾನದ ಮೊದಲ ಸ್ವಾತಂತ್ರ್ಯೋತ್ಸವದ ಮುನ್ನ ನನ್ನ ಸಹ ದೇಶವಾಸಿಗಳಿಗೆ, ಅವರು ಭಾರತದಲ್ಲಿರಲಿ ಇಲ್ಲವೆ ವಿದೇಶದಲ್ಲಿರಲಿ, ಶುಭಾಶಯಗಳನ್ನು ಮತ್ತು ನಮಸ್ಕಾರಗಳನ್ನು ತಿಳಿಸಲು ನನಗೆ ಬಹಳ ಸಂತೋಷವೆನಿಸುತ್ತದೆ.

ನಮ್ಮ ಗಡಿಗಳನ್ನು ಕಾಯುತ್ತಿರುವ ಶೂರ ಯೋಧರಿಗೆ, ನಮ್ಮ ರೈತರಿಗೆ, ಕಾರ್ಮಿಕರಿಗೆ, ವೃತ್ತಿನಿರತರಿಗೆ, ಸಾಹಸೋದ್ಯಮಿಗಳಿಗೆ, ನಮ್ಮ ಶಿಕ್ಷಕರಿಗೆ, ವೈದ್ಯರಿಗೆ, ಅಭಿಯಂತರರಿಗೆ, ವಿಜ್ಞಾನಿಗಳಿಗೆ ಮತ್ತು ತಂತ್ರಜ್ಞಾನಿಗಳಿಗೆ ಹಾಗೂ ಭಾರತದ ಯುವಕರಿಗೆ – ಯಾರ ಶ್ರಮ ಮತ್ತು ದುಡಿಮೆಯು ಭಾರತವನ್ನು ವಿಶ್ವದ ರಾಷ್ಟ್ರಗಳಲ್ಲಿ ಅಗ್ರಣಿಯನ್ನಾಗಿ ಮಾಡಿದೆಯೋ ಅವರೆಲ್ಲರಿಗೆ ನನ್ನ ವಿಶೇಷ ಕೃತಜ್ಞತೆಯನ್ನು ತಿಳಿಸುತ್ತೇನೆ.

ಮನಮೆಚ್ಚುವಂಥ ಸಾಧನೆಗಳ ಪಟ್ಟಿ ನಮ್ಮದಾಗಿದ್ದರೂ ಬಡತನ, ಅಜ್ಞಾನ, ರೋಗ ಮತ್ತು ಕುರುಡು ನಂಬಿಕೆಗಳಿಂದ ನಾವು ಪೀಡಿತರಾಗಿದ್ದೇವೆ. ನಮ್ಮ ನೀತಿಗಳು, ಕಾರ್ಯಕ್ರಮಗಳು, ಪಂಚವಾರ್ಷಿಕ ಯೋಜನೆಗಳು ಮತ್ತು ಇತರೆ ಅಭಿವೃದ್ಧಿಶೀಲ ಪ್ರಯತ್ನಗಳು ನಮ್ಮ ಮುಕ್ತ ಆರ್ಥಿಕ ನೀತಿಯಲ್ಲಿ ಪ್ರತಿಫಲಿತವಾಗಿವೆಯಾದರೂ ಸ್ವಾತಂತ್ಯದ ಐದು ದಶಕಗಳ ನಂತರ ನಮ್ಮ ವಿಶಾಲ ಜನಕೋಟಿಗೆ ಮೂಲಭೂತ ಅಗತ್ಯಗಳನ್ನು ಪೂರೈಸುವಲ್ಲಿ ಅವು ಸಾಲದಾಗಿವೆ. ಸ್ವಾತಂತ್ರ್ಯದ ಫಲದ ರುಚಿಯನ್ನು ನೋಡಲು ತಮಗೆ ಇನ್ನೂ ಸಾಧ್ಯವಾಗಿಲ್ಲವೆಂಬ ಅನಿಸಿಕೆ ಸಾಮಾನ್ಯ ಪುರುಷ-ಸ್ತ್ರೀಯರಲ್ಲಿ ಮನೆ ಮಾಡಿದೆ. ಇದಕ್ಕೆ ವಿಪರೀತವಾಗಿ, ಸ್ವಾತಂತ್ರ್ಯದ ನಂತರದ ಸಮಾಜದ ಪರಿಸ್ಥಿತಿ, ಅದರಲ್ಲಿಯೂ ಮುಖ್ಯವಾಗಿ ಸ್ಥಿತಿವಂತರಲ್ಲಿ ಉಂಟಾಗಿರುವ ಹೆಚ್ಚಿನ ಶ್ರೀಮಂತಿಕೆ ಕೆಲವು ಪ್ರಕಾರದ ದುಷ್ಫಲಗಳಿಗೆ ಕಾರಣವಾಗಿದೆ. ನಮ್ಮ ಬಹುರೂಪಿ ಸಮಾಜದಲ್ಲಿ ಸರ್ವಧರ್ಮ ಸಹಿಷ್ಣುತೆ ಮತ್ತು ಅನೇಕ ಬಗೆಯ ಸಿದ್ಧಾಂತಗಳ ಐಕ್ಯತೆಗೆ ಶಕ್ತಿಯಾಗಿದ್ದಂಥವುಗಳು. ಈಗ ಅವು ಮುರಿದು ಬೀಳುತ್ತಿರುವ

ಲಕ್ಷಣಗಳನ್ನು ತೋರುತ್ತಿವೆ ಮತ್ತು ಹಿಂಸೆಯಲ್ಲಿ ಪರ್ಯವಸಾನವಾಗುವಂಥ ಹೊಸ ಅಸಹಿಷ್ಣುತೆ ರೂಪಗೊಳ್ಳುತ್ತಿದೆ. ಅಲ್ಲದೆ, ಆಧುನಿಕತೆಯ ಮಾರ್ಗದಲ್ಲಿಯ ಮುನ್ನಡೆಗೆ ಬಾಧಕವಾಗುತ್ತಿರುವ ಹಳೇ ಕುರುಡು ನಂಬಿಕೆಗಳು ಮತ್ತು ಹಳೇ ಸಾಮಾಜಿಕ ರೂಢಿಗಳು ಪುನಃ ತಲೆಯೆತ್ತಿವೆ. ಉದಾಹರಣೆಗೆ, ಬಾಲವಿವಾಹ. ಇದನ್ನು ಭಾರತದ ಸಾಮಾಜಿಕ ಸುಧಾರಕರ ಒತ್ತಾಯದ ಮೇರೆಗೆ ಬ್ರಿಟಿಷರ ಕಾಲದಲ್ಲಿ ಕಾನೂನು ವಿರುದ್ಧವೆಂದು ಮಾಡಲಾಗಿತ್ತು. ಆದರೆ ಇಂದು ಭಾರತದ ಕೆಲ ರಾಜ್ಯಗಳಲ್ಲಿ ಬಾಲವಿವಾಹಗಳು ಸರ್ವ ಸಾಮಾನ್ಯವಾಗಿವೆ; ಅವುಗಳನ್ನು ಬಹಿರಂಗವಾಗಿ ಯಾವುದೇ ಕಾನೂನಿಕ ಅಡೆತಡೆಯಿಲ್ಲದೆ ನಮ್ಮ ಪ್ರಚಾರ ಪ್ರಿಯ ಮಾಧ್ಯಮದಲ್ಲಿ ಪ್ರಚಾರ ಪಡೆಯುತ್ತಿವೆ. ನಮ್ಮ ಮಹಿಳೆಯರನ್ನು ಮಾನವರಿಗಿಂತ ಕೀಳಾಗಿ ನಡೆಸಿಕೊಳ್ಳಲಾಗುತ್ತಿದೆ. ವರದಕ್ಷಿಣೆ ಆಸೆಗಾಗಿ ದುರಾಸೆಯ ಗಂಡಂದಿರಿಂದ ಮತ್ತು ಅತ್ತೆಮಾವಂದರಿಂದ ಯೌವನದಲ್ಲಿರುವ ಮಹಿಳೆಯರ ದಹನಕ್ರಿಯೆ ಆಗುತ್ತಿರುವುದನ್ನು ನಾವು ದಿನಾಲು ಪತ್ರಿಕೆಗಳಲ್ಲಿ ಓದುತ್ತೇವೆ. ಕಾನೂನನ್ನು ಜಾರಿಗೊಳಿಸಬೇಕಾದವರು ಉದಾಸೀನವಾಗಿಯೊ ನಿಷ್ಕ್ರಿಯರಾಗಿಯೋ ಉಳಿಯುತ್ತಾರೆ ಮತ್ತು ಸ್ವತಃ ಕಾನೂನೇ ಬಹಳಷ್ಟು ನಿಃಸಹಾಯಕವಾಗಿಬಿಡುತ್ತದೆ. ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗುತ್ತಿವೆಯೆಂದು ಅಂಕಿಸಂಖ್ಯೆಗಳು ಸಾರುತ್ತಿವೆ. ಅವರಿಗೆ ಯಾವ ಸ್ಥಳವೂ ಸುರಕ್ಷಿತವಾಗಿಲ್ಲ. ಅವರ ಸ್ವಂತ ಮನೆಯೂ ಕೂಡ. "ಭರತಭೂಮಿ ವಿಧವೆಯರ ಕಣ್ಣೀರಿನಿಂದ ಒದ್ದೆಯಾಗಿದೆ" ಎಂಬುದಾಗಿ ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಮಹಿಳೆಯರ ಬಗ್ಗೆ ತಿರಸ್ಕಾರದ ಭಾವನೆ ಇದೆ ಮತ್ತು ಅವರ ಮೇಲಿನ ಅತ್ಯಾಚಾರ ಮತ್ತು ದೌರ್ಜನ್ಯದ ಬಗ್ಗೆ ಅಗಾಧ ಉದಾಸೀನತೆಯಿದೆ. ಅಂತಃಸಾಕ್ಷಿಯಾಗಲೀ, ಸಾಮಾನ್ಯ ತಿಳುವಳಿಕೆಯಾಗಲೀ ಇಂಥ ದುರಂತಗಳ ಬಗ್ಗೆ ಸ್ಪಂದಿತವಾಗುತ್ತಿಲ್ಲವಾದ್ದರಿಂದ ಶಾಸಕರು ಈ ದುರಂತಕಾರಿ ಸಮಸ್ಯೆಯ ಬಗ್ಗೆ ಕಾನೂನುಗಳನ್ನು ಪುನರ್‌ರಚಿಸಿ ಇಂಥ ಘಟನೆಗಳ ಪುನರಾವರ್ತನೆ ಆಗದಂತೆ ಮಾಡಬಾರದೆ?

ನಮ್ಮ ಸಮಾಜದಲ್ಲಿಯ ಹಿಂಸಾಚಾರದ ಬಗ್ಗೆ ಹೇಳಿದ್ದೇನೆ. ಅಪರಾಧ ಮತ್ತು ಹಿಂಸೆ, ಅಪರಾಧಿಗಳು ರಾಜಕಾರಣಿಗಳು ಮತ್ತು ಸಮಾಜದ ಪ್ರತಿಷ್ಠಿತ ಜನರೊಂದಿಗಿನ ಸಂಬಂಧಗಳು ಅಪವಿತ್ರ ಮೈತ್ರಿಯಾಗಿ ಪರಿಣಮಿಸಿವೆ. ಯಾರು ಅಪರಾಧಿಗಳಾಗಿದ್ದಾರೋ ಅಂಥವರನ್ನು ಮಾಧ್ಯಮ ದೊಡ್ಡವರನ್ನಾಗಿ ಮಾಡುತ್ತಿದೆ ಮತ್ತು ಅವರು ಸಮಾಜದ ಹೊಸ ನಾಯಕರೊ ಎಂಬಂತೆ ಅವರನ್ನು ಕಾಣುತ್ತಿದ್ದಾರೆ. ಅಪರಾಧ ಮತ್ತು ಕಳ್ಳರ ಈ ಅತಿಧೈರ್ಯದ ದುಷ್ಟತನದ

ವಿರುದ್ಧ ನಾಗರೀಕ ಸಮಾಜ ಮತ್ತು ಶಾಸನಬದ್ಧವಾದ ಸರ್ಕಾರ ತನ್ನ ಅಧಿಕಾರ ವನ್ನು ಚಲಾಯಿಸಬೇಕು. ಪ್ರತಿಯೊಂದು ಸಾಮಾಜಿಕ ಮತ್ತು ರಾಜಕೀಯ ಹಂತಗಳಲ್ಲಿ ಅಘರಾದ ಮತ್ತು ಹಿಂಸೆಯ ವಿರುದ್ಧ ಮಾತನಾಡುವುದು ತೀವ್ರ ಅಗತ್ಯವಿರುವುದಾದರೂ ಅಂಥ ರೂಢಿಯೂ ನಮ್ಮ ದೇಶದಲ್ಲಿ ಇಲ್ಲವಾಗಿದೆ. ಬದಲಿಗೆ ಅದನ್ನು ರಂಜನೀಯವಾಗಿ ಬಣ್ಣಿಸುವ ಮನೋಧರ್ಮ ಉಂಟಾಗಿದೆ. ಬಂಗಾಳದಲ್ಲಿದ್ದ ವಸಾಹತುಶಾಹಿಯ ದಿನಗಳ ಬಗ್ಗೆ ಮಾತನಾಡುತ್ತ ಕಾಜಿ ನಝುರುಲ್ ಹೇಳಿದ್ದಾರೆ, "ದರೋಡೆಕೋರ ದೊಡ್ಡವನಾದಷ್ಟೂ, ಕಳ್ಳ ದೊಡ್ಡ ವನಾದಷ್ಟೂ, ಮೋಸಗಾರ ಜಾಣನಾದಷ್ಟೂ ಅವನ ಸ್ಥಾನ ಹೆಚ್ಚು ಗೌರವ ಯುತವಾಗಿರುತ್ತದೆ." ಅಂಥ ಕೆಟ್ಟ ಕಾಲ ನಮ್ಮ ಸಮಾಜಕ್ಕೆ ಹಿಂದಿರುಗಿ ಬರದಂತೆ ನಾವು ಎಚ್ಚರವಹಿಸಬೇಕಾಗಿದೆ.

ನನ್ನ ಸಹ ಪ್ರಜೆಗಳೇ, ಇಂಥ ನಕಾರಾತ್ಮಕ ಮನೋಭೂಮಿಕೆಯ ಮೋಡ ಸುತ್ತುವರಿದ ಸಂದರ್ಭದಲ್ಲಿಯೇ ಸಕಾರಾತ್ಮಕವೂ, ಧೈರ್ಯತಂದುಕೊಡುವಂಥದೂ ಆದ ಮನೋಭೂಮಿಕೆ ಕೂಡ ನಮ್ಮಲ್ಲಿದೆ. ಬಹಳ ಕೆಳಹಂತದಲ್ಲಿ, ದೂರದ ಹಳ್ಳಿ ಗಳಲ್ಲಿ, ಗಿರಿಜನರ ಹಾಡಿಗಳಲ್ಲಿ, ಬಡವರೂ, ಅವಕಾಶ ಹೀನ ಜನರೂ, ಮಹಿಳೆಯರೂ, ದಲಿತರೂ ತಮ್ಮ ತಮ್ಮ ಸಂಘಟನೆಗಳ ಮೂಲಕ, ಮಹಿಳಾ ಮಂಡಳಿಗಳ ಮೂಲಕ, ಸಾಮೂಹಿಕ ಪ್ರಯತ್ನ, ಉಳಿತಾಯ ಸಂಘಗಳ ಮೂಲಕ ಮತ್ತು ವ್ಯಕ್ತಿಗತವಾಗಿ ಸ್ವಪ್ರಯತ್ನದಿಂದ ತಮ್ಮ ಸಂಪನ್ಮೂಲಗಳನ್ನು ವೃದ್ಧಿಸಿ ಕೊಂಡಿದ್ದಾರೆ ಮತ್ತು ತಮ್ಮ ಜೀವನದ ಸ್ಥಿತಿಯನ್ನು ಸ್ಥಾನೀಯ ಕುಶಲತೆ ಹಾಗೂ ಸ್ವಯಂಪ್ರೇರಿತ ಶ್ರಮದ ಮೂಲಕ ಬದಲಾಯಿಸಿಕೊಂಡಿದ್ದಾರೆ. ಒಂದು ಸಲ ಮಹಾತ್ಮಾ ಗಾಂಧಿಯವರನ್ನು, "ವಿದೇಶ ಆಡಳಿತದ ವಿರುದ್ಧ ನೀವು ಹೇಗೆ ಹೋರಾಡುವಿರಿ?" ಎಂದು ಕೇಳಿದ್ದಕ್ಕೆ ಅವರು ತಕ್ಷಣ, "ಮೂಗರಾಗಿರುವ ಜನ ಕೋಟಿಯ ಬಲದಿಂದ" ಎಂಬುದಾಗಿ ಉತ್ತರಿಸಿದರು. ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆಗಾಗಿ ನಮ್ಮ ಎರಡನೆಯ ಹೋರಾಟವೂ ಕೂಡ, ನಾನು ಮೊದಲು ತಿಳಿಸಿರುವಂತೆ, ಸಾಮಾನ್ಯ ಜನರ ಶಕ್ತಿ ಮತ್ತು ಪ್ರಯತ್ನವನ್ನೇ ಬಹಳಷ್ಟು ಅವಲಂಬಿಸಬೇಕಾಗಿದೆ.

ವಿಕೇಂದ್ರೀಕರಣ ಮತ್ತು ಸಂಪನ್ಮೂಲದ ಸ್ಥಳೀಯ ಉಪಯೋಗದ ವ್ಯವಸ್ಥೆಯ ಕಾರಣದಿಂದಾಗಿ ಕೆಳಹಂತದ ಜನರಿಗೆ ಆರ್ಥಿಕ ಬಲಬಂದಿದೆ ಮತ್ತು ಅಭಿವೃದ್ಧಿ ಕೆಲಸಕ್ಕಾಗಿ ಉತ್ಸಾಹಿತರಾಗಿದ್ದಾರೆ ಮತ್ತು ತಮ್ಮ ಉನ್ನತಿ ಗಾಗಿ ಕೆಲಸಮಾಡಲು ಸಮರ್ಥರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕುರುಡಾಗಿ ಮತ್ತು ವೇಗವಾಗಿ ಮುನ್ನಡೆಯುತ್ತಿರುವ ವಿಶ್ವೀಕರಣದ ಎದುರು ಜನರು

ನಿಃಸಹಾಯಕತೆಯನ್ನು ಅನುಭವಿಸುತ್ತಿರುವಾಗ ಕೆಳಹಂತದ ಸಂಸ್ಥೆಗಳಿಗೆ ಅಧಿಕಾರದ ತೀವ್ರ ವಿಕೇಂದ್ರಿಕರಣವೇ ಒಂದು ಉತ್ತರವಾಗಿದೆ. ನಮ್ಮ ಪ್ರಾಚೀನ ಪಂಚಾಯಿತಿಗಳ ಸ್ಥಿರತೆಯನ್ನು ಕುರಿತು ಓರ್ವ ಆಂಗ್ಲ ಆಡಳಿತಾಧಿಕಾರಿ ಹೇಳಿದುದು ನನಗೆ ಜ್ಞಾಪಕಬರುತ್ತದೆ. ಅವನು ಹೇಳಿರುದು, "ವಂಶದ ನಂತರ ವಂಶ ಉರುಳುತ್ತವೆ. ಕ್ರಾಂತಿಯ ನಂತರ ಇನ್ನೊಂದು ಕ್ರಾಂತಿ ಆಗುತ್ತದೆ. ಹಿಂದೂ, ಪಠಾಣ, ಮೊಗಲ, ಮರಾಠಾ, ಸಿಖ್ಖ, ಇಂಗ್ಲೀಷ್ ಇವರೆಲ್ಲರೂ ಸರತಿಯಂತೆ ರಾಜ್ಯವಾಳುತ್ತಾರೆ. ಆದರೆ ಗ್ರಾಮೀಣ ಜನಪದ ಸ್ಥಿರವಾಗಿಯೇ ಉಳಿದಿರುತ್ತದೆ." ಇಂದು ಹಳ್ಳಿಗಳು ಹಿಂದಿನಂತೆಯೇ ಇರಬೇಕೆಂದು ನಾವು ಬಯಸುವುದಿಲ್ಲ. ಇಂದಿನ ಕಾಲಕ್ಕೆ ಅನುಗುಣವಾಗಿ ಮತ್ತು ಭಾವಿ ಸಮಯಕ್ಕೆ ಅನುಗುಣವಾಗಿ ಅವು ಬದಲಾಗಬೇಕು ಮತ್ತು ನಡೆಯಬೇಕೆಂದು ಬಯಸುತ್ತೇವೆ.

ಜನರು ಸ್ವತಃ ತಮ್ಮ ಹಕ್ಕುಗಳ ರಕ್ಷಣೆಗಾಗಿ ಮತ್ತು ಮೂಲಭೂತ ಅಗತ್ಯಗಳನ್ನು ಪಡೆಯುವುದಕ್ಕಾಗಿ ಮತ್ತು ಜೀವನದ ಪರಿಸ್ಥಿತಿಯಲ್ಲಿ ಬದಲಾವಣೆ ತರುವುದಕ್ಕಾಗಿ ಸಂಘಟಿತರಾಗುತ್ತಿರುವುದು ನಮ್ಮ ಪ್ರಜಾಪ್ರಭುತ್ವದ ಹೆಗ್ಗಳಿಕೆಯೆಂದೇ ಹೇಳಬೇಕು. ಅಂತಿಮವಾಗಿ ಪ್ರಜಾತಂತ್ರವೆಂದರೆ ಜನರು ಭಾಗವಹಿಸುವಂತೆ ಮಾಡುವ ಒಂದು ವಿಧಾನವೇ ಆಗಿದೆ. ಮಹಾತ್ಮ ಗಾಂಧೀಯವರು ೧೯೪೭ ರಲ್ಲಿ ಹೇಳಿದರು, "ಜನರು ತಮಗೆ ತಾವೇ ಪರಸ್ಪರ ಸಹಾಯ ಮಾಡಲು ಪ್ರಾರಂಭಿಸಿದರೆಂದರೆ ಸರ್ಕಾರ ಮುಂದುವರಿಯಲೇ ಬೇಕು ಮತ್ತು ಅದನ್ನೇ ನಾನು ತಳಮಟ್ಟದ ನಿಜವಾದ ಪ್ರಜಾಪ್ರಭುತ್ವವೆಂದು ಕರೆಯುತ್ತೇನೆ."

ಸುಪ್ರಸಿದ್ಧ ಹಿಂದೀ ಕವಿತೆಯೊಂದರ ಕೆಲವು ಸಾಲುಗಳನ್ನು ಹೇಳುವುದರ ಮೂಲಕ ನಾನು ನನ್ನ ಮಾತನ್ನು ಮುಗಿಸುತ್ತೇನೆ :–

ಗಣಗಣದಲ್ಲಿ ಗುಣ–ಗಣ ವಿಕಸಿಸಲಿ,
ಕಣಕಣದಿಂದ ಹೇಡಿತನ ಓಡಲಿ
ಮನಮನದಲ್ಲಿ ಭದ್ರಭಾವ ಹುಟ್ಟಲಿ
ಜನಜನರಲ್ಲಿ ನೈತಿಕತೆ ಜಾಗೃತವಾಗಲಿ
ಸಮತೆ, ಸ್ವಾತಂತ್ರ್ಯ, ಬಂಧುಭಾವದ ಧ್ವನಿಯಿಂದ ಪೃಥ್ವಿ ಪ್ರತಿಧ್ವನಿತಗೊಳ್ಳಲಿ
ಈ ಲೋಕ 'ಸತ್ಯ–ಸುಂದರ'ವಾಗಲಿ, ಮಾನವತೆಯಾಗಲಿ ಮಂಗಳಕಾರಿ.

ಗೋಹತ್ಯೆ ಮತ್ತು ಮಾಂಸದ ರಫ್ತಿಗೆ ಯಾರು ಹೊಣೆ ?

–ನರೇಂದ್ರ ದುಬೆ

ವಿಜ್ಞಾನ ಮತ್ತು ತಾಂತ್ರಿಕತೆಯ ಸಂದರ್ಭವನ್ನು ಗಮನದಲ್ಲಿರಿಸಿಕೊಂಡೇ ಮತ್ತು ದೇಶದ ವಿಕಟ ಆರ್ಥಿಕ ಸ್ಥಿತಿಯನ್ನು ನೋಡಿಯೇ ನಾವು ಗೋಹತ್ಯಾ ನಿಷೇಧದ ಬೇಡಿಕೆಯನ್ನು ಮಂಡಿಸುತ್ತಿದ್ದೇವೆ. ಗೋಹತ್ಯಾ ನಿಷೇಧದಿಂದಲೇ ನಮ್ಮ ದೇಶ ಆರ್ಥಿಕ ದಾಸ್ಯದಿಂದ ರಕ್ಷಿಸಿಕೊಳ್ಳಬಲ್ಲದು. ಭಾರತದಲ್ಲಿ ಗೋರಕ್ಷಣೆಯಿಂದಲೇ ಅಹಿಂಸಕ ಕ್ರಾಂತಿ ಆಗಲು ಸಾಧ್ಯ. ಇದರಿಂದಲೇ ಸಾವಯವ ಗೊಬ್ಬರ, ಹಾಲು, ಶಕ್ತಿ, ಗೃಹೋಪಯೋಗಿ ಅನಿಲ, ಸಾಗಾಣಿಕೆ, ನಿರುದ್ಯೋಗದಂಥ ಕಠಿಣವಾದ ಸಮಸ್ಯೆಗಳು ಬಗೆಹರಿಯಲು ಸಾಧ್ಯ ಮತ್ತು ಹಿಂಸೆಯನ್ನೂ ಅಳಿಸಬಹುದು.

ಕೃಷಿ ಪ್ರಧಾನವಾದ ಭಾರತದಲ್ಲಿ ಯಾವುದೇ ವಯಸ್ಸಿನ ಗೋವನ್ನಾಗಲೀ ಎತ್ತನ್ನಾಗಲೀ ಹತ್ಯ ಮಾಡುವುದನ್ನು ಕೇಂದ್ರೀಯ ಶಾಸನದ ಮೂಲಕ ನಿಲ್ಲಿಸಬೇಕು ಮತ್ತು ಮಾಂಸದ ರಫ್ತನ್ನು ಕೂಡ ಬಂದ್ ಮಾಡಬೇಕು ಎಂಬ ಬೇಡಿಕೆಯೊಂದಿಗೆ ವಿನೋಬಾ ೧೧ ಜನವರಿ ೧೯೮೨ ರಿಂದ ಮುಂಬೈ ಬಳಿ ದೇವನಾರ್‌ನಲ್ಲಿ ಗೋರಕ್ಷಣೆಯ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಈ ಮೊದಲು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಕೊಟ್ಟಿದ್ದ ಮಾತನ್ನು ನಡೆಸದೇ ಇದ್ದುದಕ್ಕೆ ಈ ಸತ್ಯಾಗ್ರಹವನ್ನು ವಿನೋಬಾ ಪ್ರಾರಂಭಿಸಿದ್ದರು. ಇಂದಿಗೂ ಆ ಸತ್ಯಾಗ್ರಹ ೧೮ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ.

ವಿನೋಬಾರವರು ನಿರ್ವಾಣವಾಗುವುದಕ್ಕೆ ೧೬ ದಿನಗಳ ಮೊದಲು ೧೯೮೨ ಅಕ್ಟೋಬರ್ ೩೦ ರಂದು ಶ್ರೀ ಅಟಲ್‌ಬಿಹಾರಿ ವಾಜಪೇಯಿಯವರು ರಾಜಮಾತಾ ಶ್ರೀಮತಿ ವಿಜಯರಾಜೆ ಸಿಂಧಿಯಾ ಅವರೊಂದಿಗೆ ವಿನೋಬಾರನ್ನು ಪವನಾರ ಆಶ್ರಮದಲ್ಲಿ ಭೇಟಿ ಮಾಡಲು ಬಂದಿದ್ದರು.

ಈ ಭೇಟಿಯ ನಂತರ ವಾಜಪೇಯಿಯವರು ಮುಂಬೈಗೆ ಹೋಗಿದ್ದರು. ಗೋರಕ್ಷಾ ಸತ್ಯಾಗ್ರಹದ ಸಂಚಾಲಕ ಶ್ರೀ ಅಚ್ಯುತ್‌ಭಾಯಿ ಅವರನ್ನು ಭೇಟಿ ಮಾಡಿದರು ಮತ್ತು ದೇವನಾರ್ ಸತ್ಯಾಗ್ರಹದಲ್ಲಿ ಸೇರಿಕೊಳ್ಳಬೇಕೆಂದು ಅಚ್ಯುತ್ ಭಾಯಿ ನಿವೇದನ ಮಾಡಿಕೊಂಡರು. ಆಗ ವಾಜಪೇಯಿ ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾಗಿದ್ದರು. ಅವರು ಪಕ್ಷದ ಅನುಮತಿ ದೊರೆಯುದ ತನಕ ತಾವು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲವೆಂದು ಹೇಳಿಹೋದರು.

ಈಗ ವಾಜಪೇಯಿ ಪ್ರಧಾನಮಂತ್ರಿಯಾಗಿದ್ದಾರೆ. ಗೋಹತ್ಯ ನಿಷೇಧದ ಕೇಂದ್ರೀಯ ಶಾಸನವನ್ನು ತರುವುದಿರಲಿ ಮಾಂಸದ ರಫ್ತು ನಿಲ್ಲಿಸುವುದನ್ನೂ ಸಹ ಮಾಡುತ್ತಿಲ್ಲ. ಏಕೆ ಹೀಗೆ? ಇದು ಗಂಭೀರವಾಗಿ ಆಲೋಚಿಸಬೇಕಾದ ವಿಷಯವಾಗಿದೆ.

ಗೋರಕ್ಷಣೆಯ ಪ್ರಶ್ನೆ ಪಕ್ಷ ರಾಜಕಾರಣದಿಂದಾಗಲೀ, ಅಧಿಕಾರದ ರಾಜಕಾರಣದಿಂದಾಗಲೀ ಬಗೆಹರಿಯಲಾರದೆಂಬುದನ್ನು ಇಡೀ ದೇಶ ಅರಿತುಕೊಳ್ಳಬೇಕು. ಇದು ಸಂಪ್ರದಾಯವಾದದಿಂದಲೂ ಬಗೆಹರಿಯುವುದಿಲ್ಲ. ಗೋಸೇವಾ ಕಾರ್ಯದಲ್ಲಿ ನಿಷ್ಕಾಮವಂತ ಹಿಂದೂ ಗೋ ಭಕ್ತರು ದೊಡ್ಡ ಸಹಕಾರ ಕೊಟ್ಟಿರುವುದು ನಿಜವಾದರೂ ಗೋಹತ್ಯೆಗಾಗಿ ಸಂಪ್ರದಾಯವಾದಿ ಹಿಂದೂಗಳು ಹೆಚ್ಚು ಹೊಣೆಗಾರರಾಗಿದ್ದಾರೆ. ಏಕೆಂದರೆ ಅವರು ಗೋಹತ್ಯ ನಿಷೇಧದ ಆಂದೋಲನವನ್ನು ಮುಸಲ್ಮಾನರ ಬಗ್ಗೆ ತಿರಸ್ಕಾರ ಮತ್ತು ದ್ವೇಷವನ್ನು ಹುಟ್ಟಿಸುವ ಆಂದೋಲನವನ್ನಾಗಿ ಮಾಡುತ್ತಾರೆ. ಇದಕ್ಕೆ ಪ್ರತಿಯಾಗಿ ಮುಸ್ಲಿಂರ ಮನಸ್ಸು ಹೆಚ್ಚು ಗೋ ವಿರೋಧಿ ಮತ್ತು ಹಿಂದೂ ವಿರೋಧಿ ಆಗುತ್ತಾಹೋಗುತ್ತದೆ.

ವಿನೋಬಾ ಪ್ರಾರಂಭಿಸಿರುವ ಗೋರಕ್ಷಾ-ಸತ್ಯಾಗ್ರಹದ ಆಧಾರ ಸತ್ಯ, ಪ್ರೇಮ ಮತ್ತು ಕರುಣೆ. ಗಾಂಧೀಜಿ ಹೇಗೆ ಚರಖಾವನ್ನು ಅಹಿಂಸೆಯ ಪ್ರತೀಕವೆಂದು ತಿಳಿದಿದ್ದರೋ ಮತ್ತು 'ಸೂತ್ರಯಜ್ಞ'ದಲ್ಲಿ ಎಲ್ಲರನ್ನೂ ಸೇರಿಸುತ್ತಿದ್ದರೋ ಹಾಗೆಯೇ ವಿನೋಬಾ ಗೋವನ್ನು ಪ್ರೇಮ ಮತ್ತು ಕರುಣೆಯ ಪ್ರತೀಕವೆಂದು ತಿಳಿದಿದ್ದರು ಮತ್ತು ಗೋರಕ್ಷಣೆಯ ಮಹಾನ್ ಯಜ್ಞದಲ್ಲಿ ಮುಸಲ್ಮಾನರು, ಕ್ರಿಶ್ಚನ್ನರು ಮತ್ತು ಉಳಿದವರೆಲ್ಲರೂ ಭಾಗಿಗಳಾಗಬೇಕೆಂದು ಬಯಸಿದ್ದರು. ಭಾರತದಲ್ಲಿ ಗೋರಕ್ಷೆ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಇದು ಹಿಂದೂ, ಮುಸ್ಲಿಂ, ಇಸಾಯಿ ಮುಂತಾದ ಎಲ್ಲರನ್ನೂ ಸಮನ್ವಿತಗೊಳಿಸಿದ ಒಟ್ಟು ಸಂಸ್ಕೃತಿಯಾಗಿದೆ. ಭಾರತೀಯ ಇತಿಹಾಸ ಇದಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಮೊಗಲ ಬಾದಶಹರು ಶಾಸನಮಾಡಿ ಗೋಹತ್ಯೆಯನ್ನು ನಿಲ್ಲಿಸಿದ್ದರು. ಒಂದುವೇಳೆ ಭಾರತದಲ್ಲಿ ಎಲ್ಲ ಸಮುದಾಯದ ಜನರು ಸೇರಿ ಪ್ರೇಮದಿಂದ ಗೋರಕ್ಷಣೆಯನ್ನು ಮಾಡಿದರೆ ಮತ್ತು ಎಲ್ಲ ರಾಜಕೀಯ ಪಕ್ಷಗಳು ಸೇರಿ ಗೋಹತ್ಯಾ ನಿಷೇಧದ ಶಾಸನವನ್ನು ರಚಿಸಿದರೆ ವಿಶ್ವದ ಮೇಲೆ ಬಲವಾದ ಪ್ರಭಾವ ಉಂಟಾಗುವುದು, ಭಾರತದ ಸ್ವಾತಂತ್ರ್ಯದ ಪ್ರಭಾವದ ರೀತಿಯಲ್ಲಿ. ಕಾಂಗ್ರೆಸ್ ಮತ್ತು ಭಾ.ಜ.ಪ. ಸೇರಿ ವಿಮಾ ಮಸೂದೆಯನ್ನು ಅಂಗೀಕರಿಸುವುದು ಸಾಧ್ಯವಾಗುವುದಾದರೆ ಗೋಹತ್ಯಾ ನಿಷೇಧದ ಮಸೂದೆಯನ್ನು ಅಂಗೀಕರಿಸಲು ಏಕೆ ಸಾಧ್ಯವಿಲ್ಲ?

('ಶಾಂತಿಸೇವಕ'ದ ಸಾಭಾರ)

ವೀರಪ್ಪನ್ ಸಿದ್ಧಾಂತ ಮತ್ತು ನ್ಯಾಯಾಧೀಶರ ಅಚಾತುರ್ಯದ ಅಭಿಪ್ರಾಯ

-ವಿ. ಆರ್. ಕೃಷ್ಣ ಅಯ್ಯರ್

ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರು

"ಮಿತವಾದದು ಅಪಾಯಕಾರಿ. ಅತಿ ಯಾವಾಗಲೂ ಜಯಿಸುತ್ತದೆ." ಆಸ್ಕರ್ ವೈಲ್ಡ್. ಸರ್ಕಾರವು ಡಕಾಯಿತನನ್ನು ಹಿಡಿಯಲು ಅಸಮರ್ಥವಾದರೆ ಅದು ರಾಜಿನಾಮೆ ಕೊಟ್ಟು ಬೇರೆಯವರಿಗೆ ಆ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕೆಂದು ಸುಪ್ರೀಂ ಕೋರ್ಟ್ ತನ್ನ ಅಚಾತುರ್ಯದಿಂದಾಗಿ ಅಭಿಪ್ರಾಯ ವ್ಯಕ್ತಪಡಿಸಿದಾಗ ಮಾಧ್ಯಮಗಳು ಅದನ್ನು ಶಂಕವಾದದ ರೀತಿಯಲ್ಲಿ ಪ್ರಚಾರ ಮಾಡಿದ್ದನ್ನು ನೋಡಿ ನನಗೆ ಆಸ್ಕರ್ ವೈಲ್ಡ್‌ನ ಆ ಮಾತು ನೆನಪಿಗೆ ಬಂತು. ಆ ಕೆಲಸವನ್ನು ಯಾರು ಮಾಡಲ್ಲರು? ನ್ಯಾಯಾಧೀಶರು ತಮ್ಮ ಬುದ್ಧಿವಂತಿಕೆಯಿಂದಲೆ ಅಥವಾ ರಿಟ್ ಮೂಲಕವೆ? ಓರ್ವ ಭಯೋತ್ಪಾದಕನನ್ನು ಬಂಧಿಸಲು ಸರ್ಕಾರವು ವಿಫಲವಾದ ಪಕ್ಷದಲ್ಲಿ ಆ ಸರ್ಕಾರವು ರಾಜಿನಾಮೆ ಕೊಟ್ಟು ಹೋಗಬೇಕೆಂಬ ಅರ್ಥವನ್ನು ಸೇರಿಸಲು ಸಾಧ್ಯವಾಗುವಂತೆ ನಮ್ಮ ಸಂವಿಧಾನವನ್ನು ಪುನಃ ಬರೆಯುತ್ತಿದ್ದೇವೆಯೆ ? ಶಾಸಕೀಯ ಕರ್ತವ್ಯವನ್ನು ನಿರ್ವಹಿಸದೇ ಇರುವುದು ತಪ್ಪು. ಆದರೆ ಆ ಕಾರಣಕ್ಕಾಗಿ ಸಂವಿಧಾನಬದ್ಧವಾದ ಕಾರ್ಯಪಾಲಕರನ್ನು ತೆಗೆದುಹಾಕುವುದಲ್ಲ. ಹಾಗೇನಾದರೂ ಆದಲ್ಲಿ ವಾದ ಪ್ರತಿವಾದಗಳು ಮುಗಿದು ವರ್ಷಗಳೇ ಕಳೆದುಹೋದರೂ ತೀರ್ಪನ್ನು ಕೊಡದೆ ಇರುವ ನ್ಯಾಯಾಧೀಶರು ಅಥವಾ ಶಾಸಕಾಂಗದಲ್ಲಿ ಸ್ವೀಕೃತವಾದ ಮಸೂದೆಗಳಿಗೆ ತಿಂಗಳುಗಳು ಕಳೆದರೂ ತಮ್ಮ ಒಪ್ಪಿಗೆಯ ಅಂಕಿತವನ್ನು ಹಾಕದಿರುವ ರಾಜ್ಯಪಾಲ ಅಥವಾ ರಾಷ್ಟ್ರಪತಿಯವರು ಕೂಡ ಅಪಾಯಕಾರಿಯಾದ ಪರಿಣಾಮಗಳನ್ನು ಎದುರಿಸಬೇಕಾಗಬಹುದು, ನ್ಯಾಯಾಧೀಶರು ಬಾಯಿತಪ್ಪಿ ಆಡುವ ಮಾತುಗಳು ಪತ್ರಿಕೆಯಲ್ಲೇನೋ ದೊಡ್ಡ ಅಕ್ಷರಗಳಲ್ಲಿ ಪ್ರಕಟಗೊಳ್ಳುತ್ತವೆ. ಆದರೆ ಮುಖ್ಯಮಂತ್ರಿಗಳಿಗೆ ಮತ್ತು ಅನ್ಯರಿಗೆ ಅವು ಉಂಟುಮಾಡುವ ಮಾನಸಿಕ ಹಿಂಸೆಯೂ ಕೂಡ ಅಷ್ಟೇ ದೊಡ್ಡದಾಗಿರುತ್ತದೆ. ಅದೇ ತರ್ಕವನ್ನು ನ್ಯಾಯಾಧೀಶರಿಗೆ ಹಿಂದಿರುಗಿಸಿದಾಗ ಅಪ್ರಿಯಮಾನವಲ್ಲದ ಪರಿಣಾಮಗಳುಂಟಾಗಬಹುದು.

ಬೊವೆನ್ ಎ. ಜೆ. ಒಮ್ಮೆ ನುಡಿದರು, "ಕೋಳಿಗಳು ಮೊಟ್ಟೆ ಇಡಲು ಪುನಃ ತಮ್ಮ ಗೂಡಿಗೇ ಹಿಂದಿರುಗಿ ಬರುವಂತೆ ನ್ಯಾಯಾಧೀಶರು ಬಾಯಿತಪ್ಪಿ ಹೇಳುವ ಉಪದೇಶದ ಮಾತುಗಳು ಕೂಡ ಅದೇ ನ್ಯಾಯಾಧೀಶರನ್ನು ಮುಂದಿನ ವಿವಾದಗಳಲ್ಲಿ ಅವರಿಗೇ ಮುಜುಗರವಾಗುವಂತೆ ಸುತ್ತಿಕೊಳ್ಳುವವು."

ದೇಶದ ಉನ್ನತ ನ್ಯಾಯಾಸ್ಥಾನದಿಂದ ವೀರಪ್ಪನ್ ವಿಷಯವನ್ನು ಕುರಿತು ಕಟುಟೀಕೆ ಬಂದಕೂಡಲೇ ಎರಡು ವಿಶಿಷ್ಟ ಪ್ರತಿಕ್ರಿಯೆಗಳು ಬಂದವು. ಆಗ ಒಬ್ಬರಾದರೂ ಇಂಥ ಟೀಕೆ ಮಾಡಿದರಲ್ಲ ಎಂಬ ಸಮಾಧಾನ ಅನೇಕ ಜನರಿಗೆ ಉಂಟಾಯಿತು. ಒಬ್ಬ ಭಯೋತ್ಪಾದಕ ವ್ಯಕ್ತಿ ಎಷ್ಟು ಕಾಲ ತಾನೆ ಒಬ್ಬ ಜನಾನು ರಾಗಿಯಾದ ವ್ಯಕ್ತಿಯನ್ನು ಅಪಹರಿಸಿಟ್ಟುಕೊಂಡು ತಾನು ಸಹ ಕಾನೂನು ಬಾಹಿರ ನಾಗಿದ್ದುಕೊಂಡು, ಎರಡಕ್ಕಿಂತಲೂ ಹೆಚ್ಚು ಸರ್ಕಾರಗಳ ಕಾನೂನುಗಳನ್ನು ಮೀರಿದು ಕಾಲ ತಳ್ಳಬಹುದು? ಆ ಸರ್ಕಾರಗಳು ಬಂಡಕೋರನನ್ನು ಬಂಧಿಸುವಲ್ಲಿ ವಿಫಲ ವಾಗಿ ತಮ್ಮ ಸಾಮರ್ಥ್ಯಹೀನತೆಯನ್ನು ತೋರಿಸಿವೆ ಹಾಗೂ ವೀರಪ್ಪನ್‌ನ್ನದೇ ಆದ ಒಂದು ರಾಜ್ಯದ ಸ್ಥಾಪನೆಗೆ ಕಾರಣವಾಗಿವೆ. ಅವನು ಜನರನ್ನು ಅಪಹರಿಸು ತ್ತಾನೆ, ಸಾಯಿಸುತ್ತಾನೆ. ಪೋಲೀಸರಲ್ಲಿ ಭೀತಿ ಹುಟ್ಟಿಸುತ್ತಾನೆ, ಆದರೆ ಕಾನೂನು ಮಾತ್ರ ಸತ್ತಂತೆ ಬಿದ್ದಿರುತ್ತದೆ!

ಇದು ಸ್ಪಷ್ಟವಾಗಿ ಆಡಳಿತದ ಹೊಣೆಯಿಂದ ತಪ್ಪಿಸಿಕೊಂಡಂತೆ. ಇದನ್ನು ಮುಂದಿನ ಚುನಾವಣೆಯಲ್ಲಿ ಜನರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪ್ರತಿಯೊಂದು ಪಕ್ಷವೂ ತಾನು ಅಧಿಕಾರದಲ್ಲಿದ್ದಾಗ ಇದೇ ತಪ್ಪನ್ನೇ ಮಾಡುತ್ತ ಹೋದರೆ ಸಮಾಜ ಏನು ಮಾಡಬೇಕು? ಕೊನೆಯಿಲ್ಲದ ಭೀತಿಯಲ್ಲಿಯೇ ಇರಬೇಕೆ?

ಪ್ರತಿಯೊಂದು ಸರ್ಕಾರವೂ ಕಾನೂನನ್ನು ಕೈಬಿಟ್ಟರೆ ನ್ಯಾಯಾಂಗದ ಆದೇಶ ಕಾರ್ಯಗತವಾಗದೆ ಉಳಿಯುತ್ತದೆ. ಕಾನೂನನ್ನು ಪ್ರಶ್ನಾತೀತವಾಗಿ ಅನುಸರಣೆ ಮಾಡಬೇಕಾದುದು ಆಡಳಿತದ ಅನಿವಾರ್ಯ ಕರ್ತವ್ಯವೆಂದು ಒತ್ತಾಯ ಮಾಡಿದ ನ್ಯಾಯಾಧೀಶರಿಗೆ ನನ್ನ ವಂದನೆಗಳು. ಯಾವುದೇ ಒಂದು ಸರ್ಕಾರ ಶರಣಾಗತ ವಾಗಬಹುದೇ ಮತ್ತು ಜನತೆಯನ್ನು ಅಂತ್ಯಗೊಳ್ಳದ ಅಪಾಯಕ್ಕೆ ತಳ್ಳಬಹುದೆ? ಆಡಳಿತದ ಮನೋದೌರ್ಬಲ್ಯವನ್ನು ನ್ಯಾಯಾ ಲಯ ಖಂಡಿಸಿದಾಗ ನನಗೆ ಸಂತೋಷವೆನಿಸಿತು. ನ್ಯಾಯಾ ಲಯ ಮಾಡಿದ ಟಿಪ್ಪಣಿಯನ್ನು ಕುರಿತು ಬಂದ ಜನತೆಯ ಪ್ರತಿಕ್ರಿಯೆಯಿಂದ ಕಾನೂನಿನ ಗೌರವ ಹೆಚ್ಚಾಯಿತು; ಕಾನೂನು ಸಂವಿಧಾನದ ಮೂಲಭೂತ ಅಂಶ ಎಂಬುದೂ ಸಿದ್ಧವಾಯಿತು. ಆದರೆ ನಿಲುವಂಗಿ ಧರಿಸಿರುವ ನನ್ನ ಸಹೋದರರು ಸರಕಾರ ಜಾಗ ಖಾಲಿ ಮಾಡಬೇಕು ಮತ್ತು ಆ ಸ್ಥಳಕ್ಕೆ ಬೇರೆ ಯವರು ಬರಬೇಕು ಎಂಬುದಾಗಿ ಅಧಿಕಾರಯುತವಾಗಿ ಹೇಳಬಹುದೆ? ಕರ್ನಾಟಕ ದಲ್ಲಿ ಎಲ್ಲ ರಾಜಕೀಯ ಪಕ್ಷಗಳು. ವಿರೋಧಪಕ್ಷವೂ ಸೇರಿದಂತೆ, ಮುಖ್ಯಮಂತ್ರಿಗೆ ಬೆಂಬಲವಾಗಿ ನಿಂತಿವೆ. ಅಂದಮೇಲೆ ನ್ಯಾಯಾಲಯದ ಮೇರೆಗೆ ಮುಂದಿನ ಮುಖ್ಯಮಂತ್ರಿಯಾಗಿ ಯಾರು ಪ್ರಮಾಣವಚನ ಸ್ವೀಕರಿಸುವರು ಮತ್ತು ವೀರಪ್ಪ

ನನ್ನು ಬಂಧಿಸುವರು?

ಇಂದು ಇಂದಿನ ಸ್ಥಿತಿಯು ಶೋಚನೀಯ ಸಂಗತಿ. ಕೇಂದ್ರ ಸರ್ಕಾರದ ನೆರವಿನಿಂದ ಸೈನ್ಯವನ್ನು ನುಗ್ಗಿಸಿದರೆ ವೀರಪ್ಪನನ್ನು ಬಂಧಿಸಬಹುದು. ಆದರೆ ಡಾ॥ ರಾಜಕುಮಾರರಿಗೆ ಅಪಾಯ ಒದಗುವ ಸಂಭವವಿದೆ. ಹಾಗೇನಾದರೂ ಆದಲ್ಲಿ ತಮಿಳರ ವಿರುದ್ಧ ದೊಡ್ಡ ಹಿಂಸೆಯೇ ಕರ್ನಾಟಕದಲ್ಲಿ ಉಂಟಾಗಬಹುದು. ಕಾವೇರಿ ಜಲವಿವಾದದ ಸಂದರ್ಭದಲ್ಲಿ ಹಾಗದದ್ದುಂಟು. ಕೋಪಗೊಂಡ ದೊಂಬಿಯಲ್ಲಿಯ ಜನ ಮಾಡಿದ್ದೇ ಕಾನೂನಾಗುತ್ತದೆ. ೧೯೮೪ ರಲ್ಲಿ ದಿಲ್ಲಿಯಲ್ಲಿ ಸಿಖ್ಖರ ವಿರುದ್ಧ ದೊಡ್ಡ ದೊಂಬಿಯೇ ಆಯಿತು. ಪೋಲಿಸರು ಆ ಕೋಮು ಗಲಭೆಯನ್ನು ನಿಲ್ಲಿಸಲಾರದೇ ಹೋದರು. ಆಗ ಸುಪ್ರೀಂ ಕೋರ್ಟ್‌ಗೆ ಆ ವ್ಯಾಪಕ ದುರಂತವನ್ನು ನಿಲ್ಲಿಸಲು ಸಾಧ್ಯವಾಯಿತೆ ಅಥವಾ ಆಗಿನ ಪ್ರಧಾನಮಂತ್ರಿ ರಾಜೀನಾಮೆ ಕೊಟ್ಟು ಬೇರೆಯವರಿಗ ಅವಕಾಶ ಮಾಡಿಕೊಡಬೇಕೆಂದು ಸೂಚನೆ ಕೊಟ್ಟಿತೆ? ದೇಶದ ವಿಭಜನೆಯಾಗಿ ಇತಿಹಾಸ ಕಂಡರಿಯದಷ್ಟು ದೊಡ್ಡ ಪ್ರಮಾಣದಲ್ಲಿ ರಕ್ತಪಾತ ಮತ್ತು ದುಃಖ ಉಂಟಾದಾಗ ರಾಜೀನಾಮೆ ಕೊಟ್ಟು ಬೇರೆಯವರಿಗೆ ಅವಕಾಶ ಮಾಡಿಕೊಡಿ ಎಂದು ಘನ ನ್ಯಾಯಾಧೀಶರು ನೆಹರೂ ಮತ್ತು ಪಟೇಲರನ್ನು ಕೇಳಿದರೆ?

ನ್ಯಾಯಾಂಗದ ಶೌರ್ಯ ಯಾವ ಸಮಸ್ಯೆಯನ್ನೂ ಬಗೆಹರಿಸಲಾರದು. ಆದರೆ ವೀರಪ್ಪನನ್ನ ಸಂಬಂಧದಲ್ಲಿ ಕಂಡುಬಂದ ನ್ಯಾಯಾಂಗದ ಕೀರ್ತಿ ಸಂವಿಧಾನದ ಮೂಲತತ್ವ ಮತ್ತು ಜನತೆಯ ಬಗೆಗಿನ ಪ್ರಶ್ನಾತೀತ ಕರ್ತವ್ಯ ಇವುಗಳ ಬಗ್ಗೆ ದೇಶಕ್ಕೆ ಒಂದು ಎಚ್ಚರಿಕೆಯನ್ನು ಕೊಟ್ಟಿದೆ. ಆದಿಲ್ಲದೇ ಹೋದಲ್ಲಿ ಕಾಡಿನ ಶಾಸನ ತೃಪ್ತಿಕರವಲ್ಲದೇ ಇರುವ ಕಾರ್ಯಾಂಗವನ್ನು ಹೊರಎತ್ತಿಹಾಕುವುದು. ನಮ್ಮ ಉನ್ನತನ್ಯಾಯಾಲಯದ ನ್ಯಾಯಧೀಶರು ಸಾಮಾನ್ಯವಾಗಿ ಮೆಚ್ಚುಗೆಯಾಗುವ ರೀತಿಯಲ್ಲಿಯೇ ಕಾರ್ಯ ನಿರ್ವಹಿಸಿದ್ದಾರೆ. ಕೆಲವೊಂದು ಸಲ ತಪ್ಪಾಗಿರಬಹುದು. ಆದರೆ ನಾಜೂಕಾದ, ಅಪಾಯಕಾರಿಯಾದ, ಜಾರಿಕೆಯಿಂದ ಕೂಡಿದ ಸಮಸ್ಯೆಗಳನ್ನು ಬಿಡಿಸಲು ತೊಡಗಿರುವ ಸರ್ಕಾರದ ಇತರ ಇಲಾಖೆಗಳಿಗೆ ನ್ಯಾಯಪೀಠವು ತೇಜೋವಧೆ ಮಾಡಬಾರದು. ಸುಪ್ರೀಂಕೋರ್ಟ್ ಅಂತಿಮ. ಆದ್ದರಿಂದ ಅದು ತಪ್ಪೇ ಮಾಡುವುದಿಲ್ಲ ಎಂಬುದು ಸರಿಯಲ್ಲ. ಅಚಾತುರ್ಯವಾಗಿ ಹೇಳಿದ ಮಾತು ಯಾರನ್ನೂ ಬದ್ಧರನ್ನಾಗಿ ಮಾಡುವುದಿಲ್ಲ. ಆ ಮಾತನ್ನು ವ್ಯಕ್ತಿಯನ್ನು ಸಹ. ನ್ಯಾಯಾಧೀಶರು ಪವಿತ್ರವಾದ ಪೀಠದ ಮೇಲೆ ಕುಳಿತುಕೊಳ್ಳುತ್ತಾರೆ ಮತ್ತು ಉದಾತ್ತವಾದ ಕಾರ್ಯನಿರ್ವಹಿಸುತ್ತಾರೆ. ಆದ್ದರಿಂದಲೆ "ಭಾರತದ ಪ್ರಜೆಗಳಾದ ನಾವು" ಈ ಉನ್ನತ ಪೀಠದ ಕಡೆಗೆ ಅಂತಿಮ ತೀರ್ಪಿಗಾಗಿ

ನೋಡುತ್ತೇವೆ. ಆದರೆ ನ್ಯಾಯವಿತರಣೆಯು ನೈಜತೆ, ರಾಜತಂತ್ರ ಮತ್ತು ಮುತ್ಸದ್ದಿತನ ಇವೆಲ್ಲವೂ ನ್ಯಾಯದಾನದ ಪಾಂಡಿತ್ಯದ ಅವಿಭಾಜ್ಯ ಅಂಗವಾಗಿವೆ. ಪ್ರಪಂಚದ ಅತ್ಯಂತ ಒಲಾಢ್ಯ ದೇಶದ ಅತ್ಯಂತ ಶಕ್ತಿಶಾಲಿ ನ್ಯಾಯಾಲಯದ ಅತ್ಯಂತ ಹಿರಿಯ ನ್ಯಾಯಾಧೀಶನಾಗಿದ್ದವನು ಮಾರ್ಶಲ್. ಆದರೆ ಅಧ್ಯಕ್ಷ ಆಂಡ್ರೂ ಜಾಕ್‌ಸನ್ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸಬಹುದೇ ಹೇಗೆ ಎಂಬ ಬಗ್ಗೆ ಊಹಾಪೋಹ ನಡೆದಾಗ ಜಾನಸನ್ ಅಂದದ್ದೇನು ಗೊತ್ತೇ? "ಜಾನ್ ಮಾರ್ಶಲ್ ತಮ್ಮ ತೀರ್ಮಾನ ತಿಳಿಸಿದ್ದಾರೆ. ಈಗ ಅದನ್ನು ಅವರೇ ಜಾರಿಗೊಳಿಸಲಿ!" ಹಣ ಅಥವಾ ಕತ್ತಿಯ ಬಲ ಇಲ್ಲದಿದ್ದರೂ ಜನರ ಅತಿಯಾದ ನಂಬಿಕೆಯೇ ನ್ಯಾಯಾಲಯವನ್ನು ಕಾಪಾಡಿಕೊಂಡು ಬಂದಿದೆ. ನ್ಯಾಯಾಲಯ ಉನ್ನತ ಕಾರ್ಯಾಧಿಕಾರಿಯೂ ಅಲ್ಲ, ತೃತೀಯ ಸಭೆಯೂ ಅಲ್ಲ.

ಅಧ್ಯಕ್ಷ ನಿಕ್ಸನ್ ನ್ಯಾಯಾಧೀಶ ಸಿರಿಕಾನನ ಆದೇಶವನ್ನು ಹೇಗೆ ಪಾಲಿಸಿದರು ಮತ್ತು ಬಹುದೊಡ್ಡ ಬಹುಮತದಿಂದ ಆಯ್ಕೆಯಾಗಿ ಬಂದಿದ್ದರೂ ನ್ಯಾಯಾಲಯ ಅವರ ವಿರುದ್ಧ ತೀರ್ಪು ಕೊಟ್ಟದ್ದರಿಂದ ಹೇಗೆ ನಿಕ್ಸನ್ ತಮ್ಮ ಸ್ಥಾನಕ್ಕೆ ರಾಜೀನಾಮೆಕೊಟ್ಟರು ಎಂಬುದನ್ನು ಆರ್ಕಿಬಾಲ್ಡ್ ಕೋಕ್ಸ್ ವಿವರಿಸಿದ್ದಾನೆ.

ಸಂವಿಧಾನದ ತತ್ವವು ಜಾರಿಗೆ ಬರಲು, ನಮ್ಮ ಸ್ವಾತಂತ್ರ್ಯದ ರಕ್ಷಣೆಯಾಗಲು ಮತ್ತು ನಮ್ಮ ಸಮಾಜದ ಹಿತ ರಕ್ಷಿತವಾಗಲು ಕಾರಣ ದುರ್ಬಲರ ಸ್ವಾತಂತ್ರ್ಯವು ಶಾಸನದ ಅನುಷ್ಠಾನವನ್ನೂ, ಶಾಸನದ ಅನುಷ್ಠಾನವು ಸ್ವೇಚ್ಛೆಯಿಂದ ಕೂಡಿದ ಸಮ್ಮತವನ್ನೂ ಅವಲಂಬಿಸಿದೆ ಎಂಬ ಈ ಮಾತನ್ನು ಇಡೀ ಜನಸಮುದಾಯ ಅರ್ಥಮಾಡಿಕೊಂಡಿರುವುದೇ ಆಗಿದೆ. ಆ ತಿಳುವಳಿಕೆಯು ಪರೀಕ್ಷಾಕಾಲ ಬಂದಾಗ ಅದು ಸಾಕಷ್ಟು ಬಲವಾಗಿರಬೇಕಾಗುತ್ತದೆ. ಆಗ ಜನರು ನೈತಿಕವಾಗಿಯೂ, ರಾಜಕೀಯವಾಗಿಯೂ ಎದ್ದೇಳುತ್ತಾರೆ ಮತ್ತು ಅಪರಾಧಿಯನ್ನು ಬಂಧಿಸುತ್ತಾರೆ. ಸಂವಿಧಾನತತ್ವದ ಬೇರುಗಳು ಜನರ ಹೃದಯದಲ್ಲಿವೆ.

ವಾಟರಗೇಟ್ ಟೇಪುಗಳಿಂದ ನಾವು ಪಾಠ ಕಲಿಯಬೇಕಾಗಿದೆ. ನಾವು ಜನರು ನ್ಯಾಯಾಲಯವನ್ನು ಅಧಿಕಾರದ ಗೌರಿಶಂಕರವೆಂದು ತಿಳಿಯುತ್ತೇವೆ. ಆದ್ದರಿಂದ ನ್ಯಾಯಾಧೀಶರು ಸಂಯಮ ಮತ್ತು ಅಧಿಕಾರ, ವಾಸ್ತವತೆ ಮತ್ತು ನಿರ್ಭೀತತೆ ಇವುಗಳ ಸಂಯೋಜನೆಯನ್ನು ಪ್ರಕಟಪಡಿಸಬೇಕು. ಆರ್ಕಿಬಾಲ್ಡ್ ಕೋಕ್ಸ್‌ನ ವಾದ ಈ ರೀತಿ ಇದೆ. "ಸಂವಿಧಾನತತ್ವವನ್ನು ಮತ್ತು ಕಾನೂನಿನ

ಅನುಸರಣೆಯನ್ನು ಜನರು ಏಕೆ ಬೆಂಬಲಿಸುತ್ತಾರೆ ಮತ್ತು ನ್ಯಾಯಾಲಯಗಳನ್ನು ತಮ್ಮ ಸಾಧನೆಗಳೆಂದು ಏಕೆ ಭಾವಿಸುತ್ತಾರೆ? ಈ ಬೆಂಬಲ ಮುಂದುವರಿಯುವುದೇ?" (ಪುಟ ೨೫)

ಕಾನೂನು ನ್ಯಾಯಾಧೀಶರನ್ನೂ ಮತ್ತು ನ್ಯಾಯಕ್ಕೆ ಒಳಪಟ್ಟವರನ್ನೂ ಬದ್ಧಗೊಳಿಸುತ್ತದೆ. ನ್ಯಾಯಪೀಠದಿಂದ ಆಡಲಾದ ಮಾತುಗಳು ಮತ್ತು ಸ್ವತಃ ನ್ಯಾಯಾಧೀಶನ ಮಾತುಗಳು ಮೃದುವಾಗಿರಬೇಕಲ್ಲದೆ ಉತ್ತೇಜಕವಾಗಿರಕೂಡದು, ದಂತಗೋಪುರದಲ್ಲಿಯ ಮಾತಾಗಿರದೆ ವ್ಯವಹಾರಿಕವೂ, ಗ್ರಾಹ್ಯವೂ, ಸೂಕ್ಷ್ಮಗ್ರಾಹಿಯೂ ಆಗಿರಬೇಕು. ವೀರಪ್ಪನ್ನನ ಬಂಡಕೋರತನವನ್ನು ಕುರಿತು ಮತ್ತು ಅವನನ್ನು ಬಂಧಿಸಲು ವಿಫಲವಾದುದನ್ನು ಅಪಹಾಸ್ಯಮಾಡುವುದು ಸರಿಯೆ. (ರಾಜೀವ್ ಧಾವನ್‌ನ ಮಾತಿನಲ್ಲಿ). ಅದರೆ ಆಡಳಿಗಾರನೊಬ್ಬ ಶಾಂತಿಯನ್ನು ಕಾಪಾಡಬೇಕಾದಾಗ ಅವನು ಎದುರಿಸಬೇಕಾದ ಸಂಗತಿಗಳನ್ನು ಊಹಿಸಿಕೊಳ್ಳಲು ನ್ಯಾಯಾಧೀಶರು ಶಕ್ತರಾಗಿರಬೇಕು. ಅರ್ಧ ಶತಮಾನಕ್ಕೂ ಹಳೆಯದಾದ ಬಾಬರಿ ಮಸೀದಿ ವಿವಾದದಲ್ಲಿ ಸುಪ್ರೀಂ ಕೋರ್ಟ್ ಏನು ಮಾಡಿದೆ? ಅವರ ಎದುರಿನಲ್ಲಿಯೇ ಅಮಾನುಷವಾದ ಹಿಂಸಾಚಾರ ನಡೆದಾಗ ಏನು ಮಾಡಿತು? ಕಾಡುಗಳ್ಳನಿಗೆ ಶರಣಾಗತನಾಗುವುದೆಂದರೆ ಸಂವಿಧಾನ ಮುರಿದು ಬಿದ್ದಂತೆಯೇ. ಹಾಗಾಗಬಾರದಿದ್ದರೆ ತ್ವರಿತವಾಗಿ ಅವನ ಬಂಧನವಾಗಬೇಕು. ಆದರೆ ಕಾನೂನು ಸತ್ತಂತಿದೆ; ಇದು ಎಂದಿಗೂ ಕೂಡದು. ಗಣರಾಜ್ಯ ಬಾಳುತ್ತದೆ. ಖಂಡಿತವಾಗಿಯೂ ಬಾಳುತ್ತದೆ. 'ಹಿಂದೂ' ಸಾಭಾರ

(ಅ.ನು ಸು. ಕಾ)

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ – ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/– ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/– ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಮ್ರ ಕೋರಿಕೆ. –ಪ್ರಕಾಶಕರು

ಸನ್ಮಾನ್ಯರಿಂದ....... ಪ್ರತಿಕ್ರಿಯೆಗಳು........

"ಜನಪದ ವಿಚಾರ"ದ ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಸುರೇಂದ್ರ ಕೌಲಗಿ ಅವರ **"ಸಂವಿಧಾನದ ಪುನರ್ ವಿಮರ್ಶೆ ಸ್ವಾಗತಾರ್ಹ"** ಲೇಖನ ತುಂಬ ಸೊಗಸಾಗಿ ಅರ್ಥಪೂರ್ಣವಾಗಿ ಮೂಡಿಬಂದಿದೆ. ಏಕೆ ಸಂವಿಧಾನದ ಪುನರ್ ವಿಮರ್ಶೆ ಆಗಬೇಕು ಅದಕ್ಕೆ ಏಕೆ ವಿರೋಧ ವ್ಯಕ್ತವಾಗುತ್ತಿದೆ ಎಂಬುದರ ಮೇಲೆ ಕ್ಷ ಕಿರಣ ಬೀರಿದೆ. ಈಗಿನ ಪರಿಸ್ಥಿತಿಯಲ್ಲಿ ಖಂಡಿತ ಸಂವಿಧಾನ ಪುನರ್ ವಿಮರ್ಶೆ ಆಗಬೇಕು. ಸಂವಿಧಾನದಲ್ಲಿ ಇರುವ ಹಕ್ಕು ಮಾತ್ರ ಅಲ್ಲದೆ ಪ್ರಜೆಗಳು ದೇಶಕ್ಕೆ ಅಗತ್ಯವಾಗಿ ಮಾಡಬೇಕಾದ ಕರ್ತವ್ಯದ ಬಗ್ಗೆನೂ ಜನರಿಗೆ ಪೂರ್ಣ ಅರಿವು ಮೂಡಿಸಬೇಕು ಹಾಗೂ ಇವೆರಡೂ ಪ್ರಜೆಗಳಿಗೆ ಸಮಾನವಾಗಿ ಹಂಚಿಕೆಯಾಗಬೇಕು. ಇಂಥಾ ಅನೇಕ ವೈಚಾರಿಕ ಲೇಖನ ಮೂಡಿಬರಲಿ ಹಾಗೂ ಸಹೃದಯು ಕನ್ನಡ ಓದುಗರ ಬಳಗ "ಜನಪದ ವಿಚಾರ" ಪತ್ರಿಕೆಗೆ ಹೆಚ್ಚಲಿ ಎಂದು ಹಾರೈಸುವೆ.

ನಂ ಭೂಮಿ —ಮಾನಸ ಸಬ್ಲಾಡಿ

ವಿಶ್ವಾಸಪೂರ್ವಕ ಕಳಿಸಿಕೊಟ್ಟ "ಜನಪದ ವಿಚಾರ" ಪತ್ರಿಕೆ ತಲುಪಿತು. ಓದಿ ತುಂಬಾ ಸಂತೋಷವಾಯಿತು. ವೈಜ್ಞಾನಿಕ, ಪ್ರಚಲಿತ, ಶೈಕ್ಷಣಿಕ, ತಾತ್ವಿಕ ಹೀಗೆ ಬಹುಮುಖೀ ವಿಚಾರಗಳನ್ನು ಈ ಸಂಚಿಕೆ ಪ್ರಸ್ತುತ ಪಡಿಸಿದೆ, ಮುದ್ರಣವೂ ಅಚ್ಚುಕಟ್ಟಾಗಿದೆ. ಇಂತಹ ಜನೋಪಯೋಗಿ ಶೈಕ್ಷಣಿಕ ಪತ್ರಿಕೆ ತರುತ್ತಿರುವ ನಿಮಗೆ ಅಭಿನಂದನೆಗಳು.

ಮೈಸೂರು —ಡಾ॥ ವಸಂತಕುಮಾರ್ ಪೆರ್ಲ

ನಿಮ್ಮ ಪತ್ರ ಮತ್ತು ಪತ್ರಿಕೆ ತಲ್ಪಿದೆ. ರಾಜಕುಮಾರ್ ಪ್ರಕರಣದ ಬಗ್ಗೆ ನಿಮ್ಮ ಆಲೋಚನೆಗಳನ್ನು ಹರಿಸಿದ್ದೀರಿ. ಇಡೀ ಪ್ರಕರಣ ಇಂದಿನ ನಮ್ಮ ಆಡಳಿತ ವ್ಯವಸ್ಥೆಯ ಬಗ್ಗೆಯಷ್ಟೇ ಅಲ್ಲ ಅಧಿಕಾರ ಸ್ಥಾನಗಳಿಗೆ ಯಾವ ಬಲವೂ ಉಳಿಯದೇ ಹೋಗಿರುವುದೂ ಒಂದು ಮುಖ್ಯ ಕಾರಣ. ಯಾವ ಅಪರಾಧವನ್ನೂ ತಡೆಹಿಡಿಯುವ ಶಕ್ತಿಯೇ ಉಡುಗಿಹೋಗುತ್ತಿದೆ. ಜನತೆಯಲ್ಲೂ ವಿಚಾರಗೊಂದಲ ವಿಪರೀತವಾಗಿದೆ. ಪತ್ರಿಕೆಗಳಲ್ಲಿ ಬರುತ್ತಿರುವ ಅಭಿಪ್ರಾಯಗಳನ್ನು ನೋಡಿದರೆ ಎಲ್ಲರೂ ಇನ್ನೊಬ್ಬರು ಹೀಗೆ ಮಾಡಬೇಕು ಹಾಗೆ ಮಾಡಬೇಕು ಎಂದು ಹೇಳ ಹೇಳಹೊರಟಿರುವುದೇ ಜಾಸ್ತಿ. ಸಾರ್ವಜನಿಕರ ಜೀವನದಲ್ಲಿ ಯಾವ ಉನ್ನತ ಆದರ್ಶಗಳೂ ಕಾಣುವುದಿಲ್ಲ. ನಮ್ಮ ಶಿಥಿಲತೆಗೆ

ಸಾಕ್ಷಿಯೋ ಎಂಬಂತೆ ವೀರಪ್ಪನ್ ಪ್ರಸಂಗ ಅಣಕಿಸುತ್ತದೆ.

ಬೆಂಗಳೂರು —ಕೆ. ಎಸ್. ನಾರಾಯಣಸ್ವಾಮಿ

ಮನೋರಂಜನೆಗಾಗಿಯೇ ಮೀಸಲಾಗಿರುವ ಕನ್ನಡದ ಹಲವಾರು ನಿಯತ ಕಾಲಿಕೆಗಳು ಪ್ರಕಟವಾಗುತ್ತಿವೆ. ಆದರೆ ವೈಚಾರಿಕತೆ ಪ್ರಬುದ್ಧತೆಗೆ ಒತ್ತು ಕೊಟ್ಟು ಕನ್ನಡದಲ್ಲಿ ಪ್ರಕಟವಾಗುತ್ತಿರುವ ಕೇವಲ ಬೆರಳೆಣಿಕೆಯ ಮಾಸಿಕಗಳಲ್ಲಿ "ಜನಪದ ವಿಚಾರ" ಹೆಗ್ಗಳಿಕೆಯ ಸ್ಥಾನವನ್ನು ಪಡೆದಿದೆಯೆಂದರೆ ಅತಿಶಯೋಕ್ತಿಯಲ್ಲ. ಹಲವಾರು ಸೇವಾ ಸಂಸ್ಥೆಗಳನ್ನು ರೂಪಿಸಿರುವ ಹಾಗೂ ಹತ್ತು ಹಲವು ಸಂಸ್ಥೆಗಳ ಸೇವಾ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಶ್ರೀ ಸುರೇಂದ್ರ ಕೌಲಗಿಯವರ ದಕ್ಷ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ಜನಪದ ವಿಚಾರ" ವಾಚಕರ ಮನೋವಿಕಾಸಕ್ಕೆ, ವೈಚಾರಿಕ ನುಡಿಕಟ್ಟಿಗೆ ಪ್ರಶಸ್ತ ಭೂಮಿಕೆಯನ್ನು ಒದಗಿಸಿದೆ. ಇಂದಿನ ಜಗತ್ತಿನ ಆಗುಹೋಗುಗಳ ಮೆಲುಕುಹಾಕುತ್ತಾ ಇಂದಿನ ಹಾಗೂ ನಾಳಿನ ಜಗತ್ತಿನ ಚಿಂತನ-ಮಂಥನದಲ್ಲಿ ತೊಡಗಿರುವ ಈ ನಿಯತಕಾಲಿಕೆ ಕೊಂಡು ಸಂಗ್ರಹಿಸಿಟ್ಟುಕೊಳ್ಳಲು ಯೋಗ್ಯವಾಗಿದೆಯೆಂದೆ ನನ್ನ ಅಭಿಪ್ರಾಯ.

ಮೇಲುಕೋಟೆ —ಕಂ.ಭಂ.ಕೃಷ್ಣಮೂರ್ತಿ

ಸೆಪ್ಟಂಬರ್ ತಿಂಗಳ ಪತ್ರಿಕೆ ತಲುಪಿತು. ವಿಚಾರಪೂರ್ಣ ಲೇಖನಗಳನ್ನು ಹೊಂದಿ ಪತ್ರಿಕೆ ಬರುತ್ತಿದೆ.

ಬೆಂಗಳೂರು —ಮಂಗ್ಳೂರು ವಿಜಯ

೧೯ನೇ ಪುಟದಿಂದ ಮಹಾದೇವ ದೇಸಾಯಿ

ಶ್ರದ್ಧಾಂ ಪ್ರಾತರ್ಹವಾಮಹೆ ಶ್ರದ್ಧಾಂ ಮಧ್ಯಂದಿನಂ ಪರಿ
ಶ್ರದ್ಧಾಂ ಸೂರ್ಯಸ್ಯ ನಿಮ್ರುಚಿ ಶ್ರದ್ಧೆ ಶ್ರದ್ಧಾಪಯೆಹ ನಃ

ನಾವು ಪ್ರಾತಃಕಾಲದಲ್ಲಿ ಶ್ರದ್ಧೆಯನ್ನು ಆವಾಹನ ಮಾಡುತ್ತೇವೆ. ಮಧ್ಯಾಹ್ನದ ಸಮಯ ಅದೇ ಶ್ರದ್ಧೆಯನ್ನು ಆವಾಹನ ಮಾಡುತ್ತೇವೆ! ಹೇ ಶ್ರಾದ್ಧ! ಶ್ರದ್ಧಾದೇವಿ! ನಮ್ಮ ಶ್ರದ್ಧೆಯನ್ನು ಗಟ್ಟಿಮಾಡು.

ಒಂದು ಸಲ ನಾನು ಮಹಾದೇವಭಾಯಿಯವರನ್ನು ಕೇಳಿದೆ, "ನೀವು ನಿಮ್ಮ ಮಗನಿಗೆ ನಾರಾಯಣ ಎಂಬ ಹೆಸರನ್ನೇಕೆ ಇಟ್ಟಿದ್ದೀರಿ?" ಎಂದು. ಮಹಾದೇವಭಾಯಿ ನನಗೆ ಹೇಳಿದರು "ನಾನು ಅಜಾಮಿಳ. ಆದ್ದರಿಂದ ನಾರಾಯಣ ಎಂಬ ಹೆಸರು ಇಟ್ಟೆ. ಕೊನೆಯ ಸಮಯದಲ್ಲಿ ನೆನಪಿಗೆ ಬರಲಿ," ಹೀಗಿತ್ತು ಅವರ ನಮ್ರತೆ.

(ಮೈತ್ರಿ ಸಾಭಾರ —ಅನು:ಸುಕೌ)

KA-SK-MND-470/2000 ತೆರೆದ_ಅಂಚೆ

To-

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ ಮೇಲುಕೋಟೆಯಲ್ಲಿ ಸಂಪಾದಿತವಾಗಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.